ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ನವೆಂಬರ್ 11, 2024

ಸಂಪುಟ : 51 ಸಂಚಿಕೆ : 178 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



**'ಅಂಕದ ಪರದೆ'**

ಒಡನಾಟ ರಂಗ ತಂಡ, ಸಿದ್ಧಗಂಗಾ ವಿದ್ಯಾ ಸಂಸ್ಥೆ ಹಾಗೂ ಇನ್‌ಸೈಟ್ಸ್ ಕೋಚಿಂಗ್ ಇನ್‌ಸ್ಟಿಟ್ಯೂಟ್ ಸಹಯೋಗದೊಂದಿಗೆ ದಾವಣಗೆರೆ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ 'ನೀನಾಸಮ್ ತಿರುಗಾಟ-2024' ಅಂಗವಾಗಿ 'ಅಂಕದ ಪರದೆ' ನಾಟಕ ಪ್ರದರ್ಶನ ನಡೆಯಿತು.

## ಜಮೀರ್‌ಗೆ ಮುಡಾ ಮುಶ್ಕಿಲ್

### ನ್ಯಾಯಾಂಗ ನಿಂದನೆ: ಕ್ರಮಕ್ಕೆ ರಾಜ್ಯಪಾಲರ ಸೂಚನೆ

ಬೆಂಗಳೂರು, ನ.10- ಮುಖ್ಯಮಂತ್ರಿಗಳ ಆಪ್ತ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ರಾಜ್ಯಪಾಲ ಥಾವರಚಂದ್ ಗೆಹಲೋತ್ ಸೂಚಿಸಿದ್ದಾರೆ.

ಮುಡಾ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಆದೇಶದ ಬಗ್ಗೆ ವಿವಾದಾತ್ಮಕವಾಗಿ ಮಾತನಾಡಿದ್ದ ಸ ಚಿವ ಜಮೀರ್ ಅಹಮ್ಮದ್ ಖಾನ್‌ಗೆ ಇದೀಗ ಸಂಕಷ್ಟ ಎದುರಾಗಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅರ್ಜಿಯನ್ನು ತಿರಸ್ಕರಿಸಿದ 'ಹೈಕೋರ್ಟ್‌ನದು ರಾಜಕೀಯ ತೀರ್ಪು' ಎಂದು ಜಮೀರ್ ಹೇಳಿದ್ದರು.

ಅಡ್ವೊಕೇಟ್ ಜನರಲ್ ಅವರಿಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಇದೇ 6ರಂದು ಪತ್ರ ಬರೆದಿದ್ದರು. 'ಹೈಕೋರ್ಟ್ ಆದೇಶದ ವಿರುದ್ಧ ಗಂಭೀರ ಆರೋಪ ಮಾಡಿದ ಮತ್ತು ನ್ಯಾಯಾಲಯದ ಸಮಗ್ರತೆಯನ್ನು ಪ್ರಶ್ನಿಸಿದ ಆಪಾದನೆ ಅವರ ಮೇಲಿದೆ. ಈ ಸಂಬಂಧ ಕಾನೂನಿನ ಅಡಿಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಸೂಚಿಸಿದ್ದಾರೆ.

ತಮ್ಮ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅವರ ಅರ್ಜಿಯನ್ನು ತಿರಸ್ಕರಿಸಿದ್ದ ಹೈಕೋರ್ಟ್,



ರಾಜ್ಯಪಾಲರ ಕ್ರಮವನ್ನು ಎತ್ತಿಹಿಡಿದಿತ್ತು.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಟಿ.ಜೆ. ಅಬ್ರಾಹಮ್ ರಾಜ್ಯಪಾಲರಿಗೆ ದೂರು ನೀಡಿದ್ದರು. ಬಳಿಕ ರಾಜ್ಯಪಾಲರು ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದರು. ಇದನ್ನು ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಹೈಕೋರ್ಟ್ ಸಿಎಂ ವಿರುದ್ಧದ ತನಿಖೆಗೆ ಆದೇಶಿಸಿತ್ತು.

ಈ ತೀರ್ಪನ್ನು ಜಮೀರ್ ಅಹಮ್ಮದ್ ಖಾನ್, ರಾಜಕೀಯ ಪ್ರೇರಿತವಾಗಿದ್ದು, ಅದೊಂದು ರಾಜಕೀಯ (2ನೇ ಪುಟಕ್ಕೆ)

## ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಗೆ ಸಮಿತಿ ರಚಿಸಲಿ

### ಅರ್ಜಿ ಕರೆಯುವ ಪದ್ಧತಿಗೆ ತಿಲಾಂಜಲಿ ಹಾಕುವಂತೆ ತರಳಬಾಳು ಶ್ರೀ ಸಲಹೆ

ಸಿರಿಗೆರೆ, ನ.10- ದೇಶಾದ್ಯಾಂತ ಇಂದು ಅನೇಕ ಕ್ರೌರ್ಯ, ಅಮಾನುಷ ಕೃತ್ಯಗಳು, ದುಶ್ಚಟಗಳು ಹೆಚ್ಚಾಗಿದ್ದು, ಮನುಷ್ಯ ಮನುಷ್ಯನನ್ನೇ ತಿನ್ನುವ ಕಾಲ ಬಂದಿದೆ. ಆದ್ದರಿಂದ ಎಲ್ಲರೂ ಸಕಲ ಜೀವರಾಶಿಗೆ ಲೇಸನ್ನೇ ಬಯಸುವ ನಮ್ಮ ಕೂಡಲ ಸಂಗನ ಶರಣರ ಚಿಂತನೆಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕಾಗಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಮತ್ತು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಭಾನುವಾರ ಜರುಗಿದ ತರಳಬಾಳು ನುಡಿಹಬ್ಬ 2024ರ ಮೂರನೇ ದಿನದ 'ಮಹಿಳೆ ಮತ್ತು ಯುವಜನತೆ' ಗೋಷ್ಠಿ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಎಳೆಯ ಮಕ್ಕಳು ಖಾಲಿ ಚೀಲಗಳಿದ್ದಂತೆ. ಹಾಗಾಗಿ ಅವರಲ್ಲಿ ಒಳ್ಳೆಯ ವಿಚಾರಗಳನ್ನು ತುಂಬಲು ಸಾಧ್ಯ. ಭಾರತ ಸಾಂಸ್ಕೃತಿಕವಾಗಿ ಹಿರಿಮೆ ಪಡೆದಿದ್ದು, ಎಲ್ಲಾ ವಿದ್ಯಾರ್ಥಿಗಳು




ರಾಮಾಯಣ, ಮಹಾಭಾರತ ಗ್ರಂಥಗಳನ್ನು ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದರು.

ಕರ್ನಾಟಕ ಸರ್ಕಾರ ನೀಡುವ ರಾಜ್ಯೋತ್ಸವ ಪುರಸ್ಕೃತ ಪ್ರಶಸ್ತಿಗಳಿಗೆ ಅರ್ಜಿಗಳನ್ನು ಕರೆಯುವ ಪದ್ಧತಿಗೆ ತಿಲಾಂಜಲಿ ಹಾಕಿ, ಅದಕ್ಕಾಗಿ ಯೋಗ್ಯ ಸಮಿತಿ ರಚಿಸಿ, ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಅರ್ಹ, ಯೋಗ್ಯರನ್ನು ಆಯ್ಕೆ ಮಾಡುವ ಹೊಸ ವ್ಯವಸ್ಥೆ ಜಾರಿಯಾಗಬೇಕು ಎಂದು ಹೇಳಿದರು. ಹೊಸನಗರ ಮೂಲೆಗದ್ದೆಯ ಸದಾನಂದ (3ನೇ ಪುಟಕ್ಕೆ)

## ವಕ್ಫ್ ನೆನಪೋಲೆಗಳು ವಾಪಸ್, ಮ್ಯುಟೇಷನ್‌ಗೆ ತಡೆ

**ರಾಜ್ಯ ಸರ್ಕಾರದಿಂದ ಆದೇಶ**

ಬೆಂಗಳೂರು, ನ. 10 – ಕೆಲವು ರೈತರ ಹಾಗೂ ಇತರೆ ಆಸ್ತಿಗಳನ್ನು ವಕ್ಫ್ ಹೆಸರಿಗೆ ಖಾತೆ ಮಾಡಲಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ, ಮ್ಯುಟೇಷನ್ ತಡೆಯಲು ಹಾಗೂ ನೋಟಿಸ್ ವಾಪಸ್ ಪಡೆಯಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ಮಾಡಲು ಯಾವುದೇ ಕಚೇರಿ ಅಥವಾ ಪ್ರಾಧಿಕಾರದಿಂದ ನೀಡಲಾದ ನಿರ್ದೇಶನಗಳನ್ನು ವಾಪಸ್ ಪಡೆಯಬೇಕು. ಮ್ಯುಟೇಷನ್ ಪ್ರಕ್ರಿಯೆ ಕೂಡಲೇ ಸ್ಥಗಿತಗೊಳಿಸಬೇಕು ಎಂದು ಕಂದಾಯ ಇಲಾಖೆ ಅಪರ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಈ ಕುರಿತು ನೀಡಲಾದ ಎಲ್ಲಾ ನೋಟಿಸ್‌ಗಳನ್ನು ಹಿಂಪಡೆಯಬೇಕು ಹಾಗೂ ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರ ವಿರುದ್ಧ ಯಾವುದೇ ಕ್ರಮ ಜರುಗಿಸುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ದಿನಾಂಕ 15.04.2024 ಹಾಗೂ 7.11.2024ರಂದು ಕಳಿಸಲಾದ ನೆನಪೋಲೆಗಳನ್ನು ತಕ್ಷಣವೇ ಹಿಂಪಡೆಯಲಾಗಿದೆ ಎಂದು ತಿಳಿಸಲಾಗಿದೆ.

ಅಲ್ಲದೇ, ಮುಖ್ಯಮಂತ್ರಿಗಳ ಆದೇಶವಿದ್ದಾಗ್ಯೂ ಮೇಲಾಧಿಕಾರಿಗಳ ಅನುಮತಿ ಇಲ್ಲದೇ 07.11.2024ರ ನೆನಪೋಲೆ – 2 ಹೊರಡಿಸಿದ ಅಧಿಕಾರಿ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ವಕ್ಫ್ ಮಂಡಳಿಯಿಂದ ರೈತರಿಗೆ ನೀಡಲಾದ ನೋಟಿಸನ್ನು ತಕ್ಷಣ ಹಿಂಪಡೆಯಬೇಕು ಹಾಗೂ ಮ್ಯುಟೇಷನ್ ಪ್ರಕ್ರಿಯೆಯನ್ನು ತಕ್ಷಣ ಸ್ಥಗಿತಗೊಳಿಸಿ, ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ರೈತರನ್ನು ಒಕ್ಕಲೆಬ್ಬಿಸಲು ನಾವು ಬಿಡುವುದಿಲ್ಲ, ಇದು ನಮ್ಮ ಸ್ಪಷ್ಟ ನಿರ್ಧಾರ. ವಿಪಕ್ಷಗಳ ಅಪಪ್ರಚಾರಗಳಿಗೆ ಕಿವಿಗೊಡದಿರಿ, (3ನೇ ಪುಟಕ್ಕೆ)

## ಅಯೋಧ್ಯೆ, 370ನೇ ವಿಧಿ ತೀರ್ಪು ನೀಡಿದ್ದ ಸಿಜೆಐ ಚಂದ್ರಚೂಡ್ ನಿವೃತ್ತ



ನವದೆಹಲಿ, ನ. 10- ನ್ಯಾಯಮೂರ್ತಿ ಡಿ.ವೈ.ಚಂದ್ರ ಚೂಡ್ ಅವರು ಭಾನುವಾರ ಸುಪ್ರೀಂಕೋರ್ಟ್‌ನ 50ನೇ ಮುಖ್ಯ ನ್ಯಾಯಮೂರ್ತಿಯಾಗಿ ತಮ್ಮ ಕಾರ್ಯನಿರ್ವಹಣೆಯ ಅವಧಿ ಪೂರೈಸಿದ್ದಾರೆ. ತಮ್ಮ 2 ವರ್ಷಗಳ ಅವಧಿಯಲ್ಲಿ ಚಂದ್ರಚೂಡ್ ಅವರು, ಹಲವಾರು ಮಹತ್ವದ ಆದೇಶಗಳನ್ನು ಹೊರಡಿಸಿದ್ದಾರೆ ಹಾಗೂ ಗಮನಾರ್ಹ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ.

ಅಯೋಧ್ಯೆ ವಿವಾದ, 370ನೇ ವಿಧಿ ಹಾಗೂ ಸಮ್ಮತಿಯ ಸಲಿಂಗ ಕಾಮವನ್ನು ಅಪರಾಧ ಮುಕ್ತಗೊಳಿಸುವುದು ಸೇರಿದಂತೆ, ಹಲವು ಮಹತ್ವದ ತೀರ್ಪುಗಳಲ್ಲಿ ಅವರು ಭಾಗಿಯಾಗಿದ್ದಾರೆ. ಅಲ್ಲದೆ ಎಂಟು ವರ್ಷಗಳ ಕಾಲದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅವಧಿಯಲ್ಲಿ ಅವರು 38 ಸಂವಿಧಾನಿಕ ಪೀಠಗಳ ಭಾಗವಾಗಿದ್ದಾರೆ.

ಸುಪ್ರೀಂ ಕೋರ್ಟ್‌ನಲ್ಲಿ ತಮ್ಮ ಕಾರ್ಯ ನಿರ್ವಹಣೆ ಅವಧಿಯಲ್ಲಿ ಅವರು 500ಕ್ಕೂ ಹೆಚ್ಚು ತೀರ್ಪುಗಳನ್ನು ನೀಡಿದ್ದಾರೆ. ಇವುಗಳು ಕಾನೂನು ಹಾಗೂ ಸಾಮಾಜಿಕ ವಲಯದಲ್ಲಿ ವ್ಯಾಪಕ ಪರಿಣಾಮ ಬೀರಿವೆ. (2ನೇ ಪುಟಕ್ಕೆ)

## ಸಿಜೆಐ ಆಗಿ ಸಂಜೀವ್ ಖನ್ನಾ ಇಂದು ಅಧಿಕಾರ ಸ್ವೀಕಾರ



ನವದೆಹಲಿ, ನ.10- ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಸೋಮವಾರ ಭಾರತದ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಖನ್ನಾ ಅವರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ನ್ಯಾಯಮೂರ್ತಿ ಖನ್ನಾ ಅವರು 51 ನೇ ಸಿಜೆಐ ಆಗಿದ್ದು, ಸುಮಾರು 6 ತಿಂಗಳ ಅಧಿಕಾರಾವಧಿ ಹೊಂದಿರುತ್ತಾರೆ.

ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ, ಅವರು 370 ನೇ ವಿಧಿ ರದ್ದತಿ, ವ್ಯಭಿಚಾರದ ಅಪರಾಧೀಕರಣ, ಚುನಾವಣಾ ಬಾಂಡ್‌ಗಳ ಯೋಜನೆ, ಇವಿಎಂ-ವಿವಿಪ್ಯಾಟ್ ಟ್ಯಾಲಿ ಇತ್ಯಾದಿಗಳ ಮಹತ್ವದ ತೀರ್ಪುಗಳ ಭಾಗವಾಗಿದ್ದಾರೆ. ಹಾಲಿ ಸಿಜೆಐ ಡಿ.ವೈ. ಚಂದ್ರಚೂಡ್ ಅವರು ಖನ್ನಾ ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ಕಳೆದ ತಿಂಗಳು ಶಿಫಾರಸ್ಸು ಮಾಡಿದ ನಂತರ ಅಕ್ಟೋಬರ್ 24 ರಂದು ಕೇಂದ್ರ ಸರ್ಕಾರ ಅವರನ್ನು ಅತ್ಯುನ್ನತ ನ್ಯಾಯಾಂಗ ಕಚೇರಿಗೆ ನೇಮಕ ಮಾಡಿತ್ತು ನವೆಂಬರ್ 11 ರಿಂದ ಜಾರಿಗೆ ಬರುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರನ್ನು ನೇಮಿಸಲು ರಾಷ್ಟ್ರಪತಿಗಳು ಸ ಂ ತೋ ಷ ಪ ಟ್ಟಿ ದ್ದಾ ರೆ (2ನೇ ಪುಟಕ್ಕೆ)

## ಚಳಿಗಾಲದ ಅಧಿವೇಶನದ ಮೊದಲ ವಾರದಲ್ಲೇ ವಕ್ಫ್ ವರದಿ

ನವದೆಹಲಿ, ನ. 10 - ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ವಾರದಲ್ಲಿ ಸಂಸದೀಯ ಸಮಿತಿ ವಕ್ಫ್ ಕುರಿತು ತನ್ನ ವರದಿಯನ್ನು ಸಲ್ಲಿಸಲಿದೆ.

ವಕ್ಫ್ (ತಿದ್ದುಪಡಿ) ಕಾಯ್ದೆ ಕುರಿತು ರೂಪಿಸಲಾಗಿರುವ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಂಬಿಕ ಪಾಲ್ ಈ ವಿಷಯ ತಿಳಿಸಿದ್ದಾರೆ. ಚಳಿಗಾಲದ ಅಧಿವೇಶನ ನವೆಂಬರ್ 25 ರಿಂದ ಆರಂಭವಾಗಲಿದೆ. ಅಧಿವೇಶನದ ಮೊದಲ ವಾರದ ಒಳಗಾಗಿ ಸಮಿತಿ ತನ್ನ ವರದಿ ಸಲ್ಲಿಸಲಿದೆ ಎಂದು ಪಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ನಡುವೆ ಹೇಳಿಕೆ (3ನೇ ಪುಟಕ್ಕೆ)

## ಹವಾಮಾನ ವೈಪರೀತ್ಯ ಮತ್ತೆ ಮಳೆ ಸಾಧ್ಯತೆ

ಬೆಂಗಳೂರು, ನ.10- ಮಳೆಗಾಲ ಮುಗಿದು ಚಳಿಗಾಲ ಆರಂಭವಾಗಿದೆ. ಇದೀಗ ಮತ್ತೆ ಅಬ್ಬರಿಸಲು ವರುಣರಾಯ ಸಜ್ಜಾಗಿದ್ದಾನೆ. ಮುಂದಿನ 48 ಗಂಟೆಗಳಲ್ಲಿ ಭಾರೀ ಮಳೆಯಾಗಲಿದೆಯಂತೆ.

ನೈರುತ್ಯ ಬಂಗಾಳ ಕೊಲ್ಲಿಯಲ್ಲಿ ಹವಾಮಾನ ವೈಪರೀತ್ಯ ಶುರುವಾಗಿದೆ. ಇದರ ಪರಿಣಾಮವಾಗಿ ಚಂಡಮಾರುತ ಸೃಷ್ಟಿಯಾಗಿದೆ.

ಹೀಗಾಗಿ ಮುಂದಿನ (2ನೇ ಪುಟಕ್ಕೆ)

ಷಾ ಕೋರಿಯರ್ ಮಾಲೀಕರಾದ
ಖೇಮಚಂದ ಬಿ. ಷಾಹ ನಿಧನ



ದಾವಣಗೆರೆ ಸಿಟಿ 146/3 ಶೀತಲ್ ಕುಂಜ್, 3ನೇ ಮೇನ್, ಪಿ.ಜೆ. ಬಡಾವಣೆ ವಾಸಿ
ಖೇಮಚಂದ್ ಬಿ. ಷಾಹ
ಇವರು ದಿನಾಂಕ 10-11-2024ರ ಭಾನುವಾರ ಮಧ್ಯಾಹ್ನ 12.00ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು.
ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.11.2024ರ ಸೋಮವಾರ ಮಧ್ಯಾಹ್ನ 4 ಗಂಟೆಗೆ ಜೈನರ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ
ಆನಂದ ಕುಮಾರ್ ಕೆ. ಷಾಹ, ಇಂಜಿನಿಯರ್
ವಸಂತ ರಸ್ತೆ, ದಾವಣಗೆರೆ. ಮೊ. : 92432 49988

## ಒಳಮೀಸಲಾತಿ ಜಾರಿಗೆ ಕೂಡಲೇ ನಿರ್ಧಾರ ಕೈಗೊಳ್ಳಲಿ

### ಸರ್ಕಾರಕ್ಕೆ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಶ್ರೀಗಳ ಒತ್ತಾಯ



ದಾವಣಗೆರೆ, ನ.10- ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಗೊಳಿಸುವ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೂಡಲೇ ಆಯೋಗ ರಚಿಸಿ ಮೂರು ತಿಂಗಳ ಕಾಲಮಿತಿಯಲ್ಲಿ ನಿರ್ಧಾರ ಕೈಗೊಳ್ಳಬೇಕು. ಅಲ್ಲಿಯ ತನಕ ಸರ್ಕಾರದ ಯಾವುದೇ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ನಡೆಸಬಾರದು ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಶ್ರೀಗಳು ಸರ್ಕಾರಕ್ಕೆ ಒತ್ತಾಯಿಸಿದರು.

ಇಂದಿಲ್ಲಿ ಶ್ರೀ ಶಿವಯೋಗ ಮಂದಿರದಲ್ಲಿ ಏರ್ಪಾಡಾಗಿದ್ದ ಜಿಲ್ಲಾ ಮಾದಿಗರ ಹಾಗೂ ಪರಿಶಿಷ್ಟ ಜಾತಿ ಮುಖಂಡರುಗಳ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿಗೆ 3 ದಶಕಗಳಿಂದ ನಡೆಯುತ್ತಿರುವ ಹೋರಾಟ ನಿರ್ಣಾಯಕ ಹಂತ ತಲುಪಿದೆ. ಇಷ್ಟವಿಲ್ಲದಿದ್ದರೂ ಮತ್ತೊಂದು ಆಯೋಗ ರಚಿಸುವ ಸರ್ಕಾರದ ನಿರ್ಧಾರವನ್ನು ಸಮುದಾಯ ಒಪ್ಪಿಕೊಂಡಿದೆ ಎಂದರು.

ಇತ್ತ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಆರೋಗ್ಯ ಇಲಾಖೆ ಸೇರಿ ಸರ್ಕಾರದ ಹಲವು ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆ ಆರಂಭಿಸಿದೆ. ಈ ನೇಮಕಾತಿ ಪ್ರಕ್ರಿಯೆ ಕೂಡಲೇ ಸ್ಥಗಿತಗೊಳ್ಳಬೇಕು ಎಂದು ಆಗ್ರಹಿಸಿದರು.

ದತ್ತಾಂಶ ಸಂಗ್ರಹಿಸುವ ನೆಪದಲ್ಲಿ ಆಯೋಗ ರಚಿಸಿ ಕಾಲಹರಣ ಮಾಡಬಾರದು ಎಂಬ ಕೋರಿಕೆ ಸಮುದಾಯದ್ದಾಗಿತ್ತು. ಆದರೆ, ರಾಜ್ಯ ಸರ್ಕಾರ ಆಯೋಗ ರಚಿಸಲು ಈಗಾಗಲೇ ತೀರ್ಮಾನಿಸಿದೆ. ವರದಿ ಸಿದ್ಧಪಡಿಸಲು ಮೂರು ತಿಂಗಳ ಗಡುವು ನೀಡುವುದಾಗಿ ಮುಖ್ಯಮಂತ್ರಿ ಮಾಹಿತಿ ನೀಡಿದ್ದಾರೆ. ಕೂಡಲೇ ಆಯೋಗ ರಚಿಸಿ ವಿಳಂಬ ಮಾಡದೇ ವರದಿ ಪಡೆದು ತೀರ್ಮಾನ ಕೈಗೊಳ್ಳಬೇಕು' ಎಂದು ಹೇಳಿದರು.

ಆದಿಜಾಂಬವ ಮಠದ ಷಡಕ್ಷರಮುನಿ ಶ್ರೀಗಳು ಮಾತನಾಡಿ, ಬಡತನ, ಹಸಿವು ಮತ್ತು ದೌರ್ಜನ್ಯವನ್ನು ಅನುಭವಿಸುತ್ತಿರುವ ಮಾದಿಗ ಸಮುದಾಯ ನಿರಂತರವಾಗಿ ಶೋಷಣೆ ಅನುಭವಿಸಿದೆ. ರಾಜಕೀಯ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರದಲ್ಲಿ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದರು.

ವಂಚನೆಗೆ ಒಳಗಾದ ಮಾದಿಗ ಸಮುದಾಯಕ್ಕೆ ಸರಿಯಾದ ಪಾಲು ಸಿಕ್ಕಾಗ ಮಾತ್ರ ಸಶಕ್ತಗೊಳ್ಳಲು ಸಾಧ್ಯವಾಗಲಿದೆ. ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು, ಶಿಕ್ಷಣ ಪಡೆಯಲು ಒಳಮೀಸಲು ಅತ್ಯಗತ್ಯವಾಗಿದೆ ತಿಳಿಸಿದರು.

ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಚ್.ವೀರಭದ್ರಪ್ಪ ಮಾತನಾಡಿ, (2ನೇ ಪುಟಕ್ಕೆ)

# ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಗೆ ಸಮಿತಿ ರಚಿಸಲಿ

**(1ನೇ ಪುಟದಿಂದ)** ಶಿವಯೋಗಾಶ್ರಮದ ಶ್ರೀ ಅಭಿನವ ಚನ್ನಬಸವ ಸ್ವಾಮಿಗಳು ಮಾತನಾಡಿ, ಭಾರತದಲ್ಲಿ ಸಾಧು ಸಂತರಿಂದ ಭಾರತಕ್ಕೆ ಬೆಲೆ ಬಂದಿದೆ. ಸಂಸ್ಕಾರಯುತ ಶಿಕ್ಷಣ ಇಂದು ಎಲ್ಲಾ ಕಡೆ ಕಡಿಮೆಯಾಗಿದೆ. ಆದರೆ ಇಂದು ಮಠಗಳಿಂದ ಶಿಕ್ಷಣ ಪಡೆದವರಲ್ಲಿ ಸಂಸ್ಕಾರಯುತ ಶಿಕ್ಷಣ, ಶಿಸ್ತು, ರೂಢಿಯಲ್ಲಿದೆ. ಭಾರತದಲ್ಲಿ ವಚನಗಳನ್ನು ತಂತ್ರಾಂಶದಲ್ಲಿ ರೂಪಿಸಿರುವ ಏಕೈಕ ಗುರುಗಳು ಸಿರಿಗೆರೆಯ ಶ್ರೀಗಳು ಎಂದು ಅಭಿಮಾನಪೂರ್ವಕವಾಗಿ ನುಡಿದರು.

ದಾವಣಗೆರೆಯ ಕನ್ನಡ ಉಪನ್ಯಾಸಕಿ ಡಾ.ಗೀತಾ ಬಸವರಾಜ್ ಮಾತನಾಡಿ, ಶತ ಶತಮಾನಗಳಿಂದ ಮಹಿಳೆ ಶ್ರೇಷ್ಠಳು, ವಚನಕಾರರು ಮಹಿಳೆಯರಿಗೆ ವಿಶೇಷ ಸ್ಥಾನ ನೀಡಿದ್ದಾರೆ. ಕೌಟುಂಬಿಕ ವಲಯಗಳಲ್ಲಿ ಮಹಿಳೆಯ ಮಹತ್ವ. ಮಹಿಳೆಯು ಬದುಕಿನ ನೇತಾರಳಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟುಕೊಂಡಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯ ಸಾಧನೆಯ ಹಾದಿ ಮೆಚ್ಚುವಂತಹದ್ದು. ಸಾಧನೆಗೆ ಸ್ಫೂರ್ತಿಯೇ ಮಹಿಳೆ. ಪ್ರತಿಯೊಬ್ಬ ಮಹಿಳೆಯಲ್ಲಿ ಚೈತನ್ಯ ಶಕ್ತಿ ಅಡಗಿದೆ. ಅಸಹಾಯಕತೆಯ ಸ್ಥಿತಿಯ ಮಹಿಳೆಯು ಇಂದು ಎಲ್ಲಾ ನಿಲುವುಗಳನ್ನು ದಾಟಿ ಮೆಟ್ಟಿ ನಿಂತಿದ್ದಾಳೆ ಎಂದು ಹೇಳಿದರು.

ಉಡುಪಿಯ ಹಾಸ್ಯ ಭಾಷಣಕಾರ್ತಿ ಸಂಧ್ಯಾಶೆಣೈ ಮಾತನಾಡಿ, ಮೌಲ್ಯಗಳು ಯುವಕರ ರಕ್ತದಲ್ಲಿ ಕರಗತವಾಗಬೇಕು. ಯಾರನ್ನೂ ಅಪಮಾನ ಮಾಡದೇ ಬದುಕುವುದು ಸಾರ್ಥಕ. ಯುವಕರು ಹೊಸತನ, ಹೊಸ ವಿಚಾರಗಳಿಗೆ ಬೆಲೆ ನೀಡಿ ಸಂಸ್ಕಾರಯುತ ಜೀವನ ನಡೆಸಬೇಕಿದೆ ಎಂದು ತಿಳಿಸಿದರು.

ಪ್ರಸ್ತುತ ಸಾಲಿನ ರಾಜ್ಯೋತ್ಸವ ಪುರಸ್ಕೃತರೂ, ಸಾಹಿತಿಗಳಾದ ಬಿ.ಟಿ.ಲಲಿತಾನಾಯ್ಕ್ ಮಾತನಾಡಿ, ಬುದ್ದ, ಬಸವ, ಅಂಬೇಡ್ಕರ್ ಈ ಮೂವರು ವ್ಯಕ್ತಿಗಳ ಆಶಯ ನಮ್ಮ ಜೀವನಕ್ಕೆ ಅತ್ಯಗತ್ಯ. ಗುರುಗಳ ಬಗ್ಗೆ ನಮ್ಮಲ್ಲಿರುವ ಭಯವೇ ನಮ್ಮ ಶಕ್ತಿಯಾಗಿ ಬೆಳೆಯುತ್ತದೆ. ಎಲ್ಲರೂ ಮೌಢ್ಯದಿಂದ ಹೊರಬಂದು ವೈಚಾರಿಕತೆಯ ನೆಲೆಗಟ್ಟಿನಲ್ಲಿ ಬದುಕಬೇಕಿದೆ ಎಂದರು.

ತಾಳಿಕೋಟೆಯ ಅಶೋಕ್ ಎಸ್.ಹಂಜಲಿ ಮಾತನಾಡಿ, ಉತ್ಸಾಹದ ಚಿಲುಮೆಯಂತಿರುವ ಯುವಕರು ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಯುವಕರು ಗುರುಭಕ್ತಿ, ದೇಶಭಕ್ತಿ, ಶ್ರದ್ಧಾಭಕ್ತಿ ಬೆಳೆಸಿಕೊಂಡು ನಾಡನ್ನು ಕಟ್ಟಬೇಕು. ಯುವಕರು ನಾಡನ್ನು ಬೆಳಗುವ ನಕ್ಷತ್ರಗಳಾಗಬೇಕು. ಜೊತೆಗೆ ಧನಾತ್ಮಕ ಚಿಂತನೆ, ದೇಶಪ್ರೇಮ ಬೆಳೆಸಿಕೊಳ್ಳಬೇಕು. ಯುವಕರಿಂದ ಮಾತ್ರ ದೇಶದ ಬದಲಾವಣೆ ಸಾಧ್ಯ ಎಂದು ಹೇಳಿದರು. ಹಾಸನ ಹಾಗೂ ಬಳ್ಳಾರಿಯ ಕಸಾಪ ಅಧ್ಯಕ್ಷರಾದ ಎಚ್. ಎಲ್ ಮಲ್ಲೇಶ ಗೌಡ, ನಿಷ್ಠಿ ರುದ್ರಪ್ಪ ಇದ್ದರು.

**ಮರೆಯಲಾಗದ ಮಹನೀಯರು ಗೋಷ್ಠಿ :** ಮಧ್ಯಾಹ್ನದ ಮರೆಯಲಾಗದ ಮಹನೀಯರು ಗೋಷ್ಠಿಯಲ್ಲಿ ಅಭಿನವ ಚನ್ನಬಸವ ಸ್ವಾಮೀಜಿಯವರು ವೈರಾಗ್ಯನಿಧಿ ಅಕ್ಕಮಹಾದೇವಿ ಬಗ್ಗೆ, ಡಾ.ಮಹಾಂತೇಶ್ ಬಿರಾದಾರ್‌ರವರು ವಚನ ಪಿತಾಮಹ ಫ.ಗು.ಹಳಕಟ್ಟೆಯವರ ಬಗ್ಗೆ, ಅನಂತ ದೇಶಪಾಂಡೆಯವರು ವರಕವಿ ಬೇಂದ್ರೆ ದರ್ಶನದ ಬಗ್ಗೆ, ಡಾ.ಎಚ್.ಟಿ ಶೈಲಜಾರವರು ಶರಣ ಸಾಹಿತ್ಯ ಚಿಂತಕ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಬಗ್ಗೆ ವಿಷಯ ಮಂಡಿಸಿದರು. ಧಾರವಾಡ ಮತ್ತು ಚಿಕ್ಕಮಗಳೂರು ಕಸಪಾ ಅಧ್ಯಕ್ಷರಾದ ಡಾ. ಲಿಂಗರಾಜ ಅಂಗಡಿ, ಸೂರ್ಯ ಶ್ರೀನಿವಾಸ್ ಅತಿಥಿಗಳಾಗಿ ಭಾಗವಹಿಸಿದ್ದರು.

## ಬಾತಿ ಬಳಿಯ ಗೋ ಕಟ್ಟೆ ವಕ್ಫ್ ಆಸ್ತಿ ?

ದಾವಣಗೆರೆ, ನ.10- ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಬಳಿಯ 4 ಎಕರೆ 14 ಗುಂಟೆ ಗೋ ಕಟ್ಟೆ ವಕ್ಫ್ ಸಂಸ್ಥೆಗೆ ಸೇರಿದ್ದು ಎಂಬ ವಿಚಾರ ಬಯಲಾಗಿದೆ.

ಸರ್ವೇ ನಂಬರ್ 243 ರಲ್ಲಿ ಇರುವ ಈ ಗೋಕಟ್ಟೆ ಪ್ರದೇಶವು 2018ರಲ್ಲಿ ಸುನ್ನಿ ವಕ್ಫ್ ಸಂಸ್ಥೆಗೆ ಸೇರ್ಪಡೆಯಾಗಿದೆ. ಈ ಬಗ್ಗೆ ಪಹಣಿಯಲ್ಲಿ ನಮೂದಾಗಿದೆ.

# ವಾಪಸ್, ಮ್ಯುಟೇಷನ್‌ಗೆ ತಡೆ

**(1ನೇ ಪುಟದಿಂದ)** ನಿಮ್ಮ ಜೊತೆ ನಮ್ಮ ಸರ್ಕಾರ ಇದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೋಟಿಸ್ ವಾಪಸ್ ಪಡೆಯುವುದಾಗಿ ಈ ಹಿಂದೆಯೂ ಹೇಳಿದ್ದರು. ಆದರೆ, ನಂತರ ಮತ್ತೆ 07.11.2024ರಂದು ಮುಖ್ಯ ಕಾರ್ಯದರ್ಶಿಯವರು ನೆನಪೋಲೆ ಹೊರಡಿಸಿ ವಕ್ಫ್ ಆಸ್ತಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದ್ದರು.

ಈ ಬಗ್ಗೆ ಮಾತನಾಡಿದ್ದ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಿದ್ದರಾಮಯ್ಯ ಅವರು ನೋಟಿಸ್ ವಾಪಸ್ ಪಡೆಯಲು ಸೂಚಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ, ಮುಖ್ಯ ಕಾರ್ಯದರ್ಶಿಯವರು ಭೂಮಿ ವಶಪಡಿಸಿಕೊಳ್ಳಲು ಲಿಖಿತ ಸೂಚನೆ ನೀಡಿದ್ದಾರೆ. ಈ ಸತ್ಯ ಮರೆಮಾಚಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಳ್ಳು ಹೇಳಿದ್ದಾರೆ ಎಂದು ಟೀಕಿಸಿದ್ದರು.

ಕಂದಾಯ ಇಲಾಖೆ ವಕ್ಫ್ ಕಾರ್ಯಪಡೆ ಸಭೆ ಪ್ರಗತಿ ಸಾಧನೆ ಬಗ್ಗೆ ಪತ್ರ ಕಳುಹಿಸಿದೆ. 21,767 ಪ್ರಕರಣಗಳಲ್ಲಿ ಅಗತ್ಯ ಕ್ರಮವಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿ ಎಂದಿದೆ. ವಕ್ಫ್ ಖಾತೆ ಬದಲಾವಣೆ ಬಗ್ಗೆ ಮತ್ತೊಮ್ಮೆ ವರದಿ ಸಲ್ಲಿಸಿ ಎಂದು ಪತ್ರ ಬರೆಯಲಾಗಿದೆ. ಸರ್ಕಾರಕ್ಕೆ ಏನಾದರೂ ಮಾನ ಮರ್ಯಾದೆ ಇದೆಯಾ? ಎಂದು ಕಟುವಾಗಿ ಪ್ರಶ್ನಿಸಿದ್ದರು.

# ಚಳಿಗಾಲದ ಅಧಿವೇಶನದ ಮೊದಲ ವಾರದಲ್ಲೇ ವಕ್ಫ್ ವರದಿ

**(1ನೇ ಪುಟದಿಂದ)** ನೀಡಿರುವ ಸಮಿತಿಯ ವಿಪಕ್ಷ ಸದಸ್ಯರು, ಕೋರಂ ಇಲ್ಲದಿದ್ದರೂ ಸಮಿತಿಯ ಅಧ್ಯಕ್ಷರು ಹಲವಾರು ರಾಜ್ಯಗಳಿಗೆ ಭೇಟಿ ನೀಡುತ್ತಿದ್ದಾರೆ ಎಂದು ಆಕ್ಷೇಪಿಸಿದ್ದಾರೆ.

ಜಗದಂಬಿಕಾ ಪಾಲ್ ಅವರು ಇತ್ತೀಚೆಗಷ್ಟೇ ಕರ್ನಾಟಕಕ್ಕೆ ಭೇಟಿ ನೀಡಿ, ವಕ್ಫ್ ಸಂತ್ರಸ್ತರಿಂದ ಮನವಿಗಳನ್ನು ಸ್ವೀಕರಿಸಿದ್ದರು. ಕರ್ನಾಟಕದಲ್ಲಿ ರೈತರ ಜಮೀನುಗಳಿಂದ ಹಿಡಿದು, ದೇವಸ್ಥಾನ, ವಸತಿ ಪ್ರದೇಶ, ವಾಣಿಜ್ಯ ಪ್ರದೇಶ ಹಾಗೂ ಸ್ಮಶಾನ ಇತ್ಯಾದಿಗಳನ್ನೂ ವಕ್ಫ್ ಆಸ್ತಿ ಎಂದು ತೋರಿಸಲಾಗುತ್ತಿದೆ ಎಂದು ದೂರುಗಳು ಕೇಳಿ ಬಂದಿವೆ.

ಕರ್ನಾಟಕವಲ್ಲದೆ ಐದು ರಾಜ್ಯಗಳಿಗೆ ಪಾಲ್ ನೇತೃತ್ವದ ಸಮಿತಿ ಪ್ರವಾಸ ಕೈಗೊಂಡಿದೆ. ಆದರೆ ಪ್ರತಿಪಕ್ಷಗಳ ಸದಸ್ಯರು ಈ ಪ್ರವಾಸಕ್ಕೆ ಬಹಿಷ್ಕಾರ ಹಾಕಿದ್ದಾರೆ.

ಕೇಂದ್ರ ಸರ್ಕಾರದ ಆಶಯದಂತೆ ಪಾಲ್ ನಡೆದುಕೊಳ್ಳುತ್ತಿದ್ದಾರೆ ಎಂದು ಪ್ರತಿಪಕ್ಷಗಳ ಸಂಸದರು ಆರೋಪಿಸಿದ್ದಾರೆ. ಸಮಿತಿ ವರದಿಯಿಂದ ದೂರ ಉಳಿಯುವುದಾಗಿಯೂ ಅವರು ಹೇಳಿದ್ದಾರೆ.

ವಿಪಕ್ಷಗಳ ಆರೋಪವನ್ನು ತಳ್ಳಿ ಹಾಕಿರುವ ಪಾಲ್, ಸಂಸದೀಯ ಸಮಿತಿಗಳ ಅಧ್ಯಯನ ಪ್ರವಾಸಗಳು ಅನೌಪಚಾರಿಕವಾಗಿವೆ. ಈ ಭೇಟಿಗಳಿಗೆ ಕೋರಂ ರೀತಿಯ ಔಪಚಾರಿಕತೆಗಳು ಅನ್ವಯವಾಗುವುದಿಲ್ಲ ಎಂದಿದ್ದಾರೆ.

# ಬಾಂಗ್ಲಾಕ್ಕೆ ಶೇಖ್ ಹಸೀನಾ ಕರೆ ತರಲು ಇಂಟರ್‌ಪೋಲ್ ಸಹಾಯ



ಢಾಕಾ, ನ.10- ಬಾಂಗ್ಲಾದ ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಇತರೆ ಆರೋಪಿಗಳನ್ನು ಭಾರತದಿಂದ ಕರೆ ತರಲು ಇಂಟರ್‌ಪೋಲ್‌ನ ಸಹಾಯ ಕೋರುವುದಾಗಿ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಭಾನುವಾರ ಹೇಳಿದೆ.

ವಿವಾದಾತ್ಮಕ ಉದ್ಯೋಗ ಮೀಸಲಾತಿಗೆ ಸಂಬಂಧಿಸಿದಂತೆ ಹಸೀನಾ ನೇತೃತ್ವದ ಅವಾಮಿ ಲೀಗ್ ಸರ್ಕಾರದ ವಿರುದ್ಧ ಕಳೆದ ಆಗಸ್ಟ್‌ನಲ್ಲಿ ಪ್ರತಿಭಟನೆಗಳು ಭುಗಿಲೆದ್ದಿದ್ದವು. ಈ ವೇಳೆ ಅಪಾರ ಪ್ರಮಾಣದ ಸಾವು-ನೋವು ಸಂಭವಿಸಿದ್ದು, ಘಟನೆಗೆ ಹಸೀನಾ ಸರ್ಕಾರದ ಹಿಂಸಾತ್ಮಕ ನೀತಿಗಳು ಕಾರಣ ಎಂದು ಆರೋಪಿಸಲಾಗಿದೆ.

ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಆಗಸ್ಟ್ 5ರಂದು ಹಸೀನಾ ಭಾರತಕ್ಕೆ ಪಲಾಯನ ಮಾಡಿದ್ದರು. ಪ್ರತಿಭಟನೆಯ ಸಮಯದಲ್ಲಿ ಕನಿಷ್ಠ 753 ಜನ ಮೃತಪಟ್ಟು, ಸಾವಿರಾರು ಮಂದಿ ಗಾಯಗೊಂಡಿದ್ದರು. ಇದು ಮಾನವೀಯತೆಯ ವಿರುದ್ಧದ ಅಪರಾಧ ಹಾಗೂ ನರಮೇಧ' ಎಂದು ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಪ್ರತಿಪಾದಿಸಿದೆ.

**60ಕ್ಕೂ ಹೆಚ್ಚು ದೂರು ದಾಖಲು:** ಹಸೀನಾ ಮತ್ತು ಅವರ ಪಕ್ಷದ ನಾಯಕರ ವಿರುದ್ಧ ಬಾಂಗ್ಲಾದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ (ಐಸಿಟಿ) ಮತ್ತು ಪ್ರಾಸಿಕ್ಯೂಷನ್‌ಗೆ ಮಾನವೀಯತೆಯ ವಿರುದ್ಧದ ಅಪರಾಧಗಳು ಮತ್ತು ನರಮೇಧ ಪ್ರಕರಣದ ಸಂಬಂಧ 60ಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ.

ಇಂಟರ್‌ಪೋಲ್ ಮೂಲಕ ಶೀಘ್ರದಲ್ಲೇ ರೆಡ್ ಕಾರ್ನರ್ ನೋಟಿಸ್ ನೀಡಲಾಗುವುದು. ಈ ಪಲಾಯನವಾದಿ ಫ್ಯಾಸಿಸ್ಟ್‌ಗಳು ಜಗತ್ತಿನ ಯಾವ ಮೂಲೆಯಲ್ಲಿ ಅಡಗಿಕೊಂಡಿದ್ದರೂ, ಅವರನ್ನು ಮರಳಿ ಕರೆತಂದು ನ್ಯಾಯಾಲಯದಲ್ಲಿ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಕಾನೂನು ವ್ಯವಹಾರಗಳ ಸಲಹೆಗಾರ ಆಸಿಫ್ ನಜ್ರುಲ್ ತಿಳಿಸಿದ್ದಾರೆ.

ಹಸೀನಾ ಮತ್ತು ಅವಾಮಿ ಲೀಗ್ ನಾಯಕರನ್ನು ಐಸಿಟಿ ನ್ಯಾಯಮಂಡಳಿಯಲ್ಲಿ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಬಾಂಗ್ಲಾ ಮಧ್ಯಂತರ ಸರ್ಕಾರ ಈ ಹಿಂದೆ ಹೇಳಿತ್ತು.

ಆದಾಗ್ಯೂ, ಕಳೆದ ತಿಂಗಳು ಯುಕೆ ಮೂಲದ ಫೈನಾನ್ಷಿಯಲ್ ಟೈಮ್ಸ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಯೂನಸ್ ಅವರು, ಹಸೀನಾರನ್ನು ಭಾರತದಿಂದ ಹಸ್ತಾಂತರಿಸುವ ಬಗ್ಗೆ ತಮ್ಮ ಸರ್ಕಾರ ತಕ್ಷಣವೇ ಪ್ರಯತ್ನಿಸುವುದಿಲ್ಲ ಎಂದೂ ಹೇಳಿದ್ದರು.

# ಹಸೀನಾ ಹಸ್ತಾಂತರಕ್ಕೆ ಇಂಟರ್‌ಪೋಲ್ ನೆರವು ಕೇಳಲಿರುವ ಬಾಂಗ್ಲಾ

ಢಾಕಾ, ನ. 10 - ಪದಚ್ಯುತ ಪ್ರಧಾನಮಂತ್ರಿ ಶೇಖ್ ಹಸೀನಾ ಅವರನ್ನು ಹಸ್ತಾಂತರಗೊಳಿಸುವ ಪ್ರಕ್ರಿಯೆಗೆ ಇಂಟರ್‌ಪೋಲ್ ನೆರವು ಪಡೆಯುವುದಾಗಿ ಬಾಂಗ್ಲಾ ದೇಶದ ಹಂಗಾಮಿ ಸರ್ಕಾರ ತಿಳಿಸಿದೆ, ಹಸೀನಾ ಹಾಗೂ ಇತರೆ ಮುಖಂಡರು ಮಾನವೀಯತೆ ವಿರುದ್ಧ ಅಪರಾಧ ಎಸಗಿದ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಅವರ ಹಸ್ತಾಂತರಕ್ಕಾಗಿ ಇಂಟರ್‌ಪೋಲ್ ಬಳಿ ನೆರವು ಕೇಳಲು ಹಂಗಾಮಿ ಸರ್ಕಾರ ಮುಂದಾಗಿದೆ. ವಿದ್ಯಾರ್ಥಿಗಳ ಪ್ರತಿಭಟನೆಯ ವೇಳೆ 753 ಜನ ಸಾವನ್ನಪ್ಪಿದ್ದರು ಹಾಗೂ ಸಾವಿರಾರು ಜನರು ಗಾಯಗೊಂಡಿದ್ದರು ಎಂದು ಹಂಗಾಮಿ ಸರ್ಕಾರ ತಿಳಿಸಿದೆ.

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಬಿ.ಆರ್. ವಿಜಯಕುಮಾರ್ ಬಿನ್ ಲೇಟ್ ರಾಮಪ್ಪ**, ವಾಸ: #362/2, ಎಂ.ಬಿ. ಕೇರಿ, ದಾವಣಗೆರೆ **ಮೊ. ನಂ. 98444-33123, 98440-75422** ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಮೇಲ್ಕಂಡ ನನ್ನ ಕಕ್ಷಿದಾರರು ಮಹಮ್ಮದ್ ಅನ್ವರ್ ಸಾಬ್ ಬಿನ್ ಲೇಟ್ ಮಹಮ್ಮದ್ ಗೌಸ್ ಸಾಬ್ ಇವರ ಜಿ.ಪಿ.ಎ. ಹೋಲ್ಡರ್ ಆಗಿ ಜಿ.ಎನ್. ಕರಿಬಸಪ್ಪ ಬಿನ್ ಜಿ.ಎನ್. ನಾಗರಾಜಪ್ಪ, ತುರ್ಚಘಟ್ಟ ಗ್ರಾಮ ಇವರ ವಿರುದ್ಧ ದಾವಣಗೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯದಲ್ಲಿ ದಾವಣಗೆರೆ ತಾಲ್ಲೂಕು, ತುರ್ಚಘಟ್ಟ ಗ್ರಾಮದ ಸ.ನಂ.100/1ಬಿ ವಿಸ್ತೀರ್ಣ 01 ಎಕರೆ 38 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಓ.ಎಸ್.ನಂ.134/2023 ರಂತೆ ಘೋಷಣಾತ್ಮಕ ಡಿಕ್ರಿ ಆದೇಶವನ್ನು ಪಡೆಯಲು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ಚಾಲ್ತಿಯಲ್ಲಿದ್ದಂತಹ ಸಂದರ್ಭದಲ್ಲಿ ಸದರಿ ಪ್ರಕರಣದ ಪ್ರತಿವಾದಿಯು ಬೇರೆಯವರ ಹೆಸರಿಗೆ ವರ್ಗಾವಣೆ ಮಾಡುತ್ತಿರುವ ಬಗ್ಗೆ ನಮ್ಮ ಕಕ್ಷಿದಾರರಿಗೆ ಮಾಹಿತಿ ತಿಳಿದು ಬಂದಿರುತ್ತದೆ.

ಈ ಮೇಲೆ ಹೇಳಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯು ಚಾಲ್ತಿಯಲ್ಲಿರುವಾಗ ಯಾವುದೇ ರೀತಿ ಪರಭಾರೆ, ವಗೈರೆ ಮಾಡಿದಲ್ಲಿ ನಮ್ಮ ಕಕ್ಷಿದಾರರಿಗೆ ಯಾವುದೇ ರೀತಿಯಲ್ಲಿ ಬಂಧನಕಾರಿಯಾಗಿರುವುದಿಲ್ಲ ಹಾಗೂ ಸದರಿ ಖಾತೆದಾರರಿಗೆ ದಾವೆ ಚಾಲ್ತಿಯಲ್ಲಿರುವಾಗ ಯಾವುದೇ ರೀತಿ ಪರಭಾರೆ, ವಗೈರೆ ಮಾಡಲು ಸಂಪೂರ್ಣ ಅಧಿಕಾರ ಇರುವುದಿಲ್ಲ.

ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವುದಾಗಲೀ, ಕ್ರಯದ ಕರಾರು ಪತ್ರ, ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ, ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಉಪನೋಂದಣಾಧಿಕಾರಿಗಳವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ತುರ್ಚಘಟ್ಟ ಗ್ರಾಮದ ರಿ.ಸ.ನಂ.100/1ಬಿ ವಿಸ್ತೀರ್ಣ 01 ಎಕರೆ 38 ಗುಂಟೆ ಜಮೀನು.

**(ಆರ್.ಟಿ. ವಿನಯ ಕುಮಾರ), ವಕೀಲರು**
#1862/19, 4ನೇ ಮೇನ್, ಹೆಚ್.ಆರ್.ಬಿ. ನಗರ,
ಸೆಂಟ್ ಜಾನ್ಸ್ ಹೈಸ್ಕೂಲ್ ಹತ್ತಿರ, ಶಿವಕುಮಾರಸ್ವಾಮಿ ಬಡಾವಣೆ,
1ನೇ ಹಂತ ದಾವಣಗೆರೆ - 577005,
M : **98445 97838**, Gmail : ajjihallivinay@gmail.com

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಬಿ.ಆರ್. ವಿಜಯಕುಮಾರ್ ಬಿನ್ ಲೇಟ್ ರಾಮಪ್ಪ**, ವಾಸ: #362/2, ಎಂ.ಬಿ. ಕೇರಿ, ದಾವಣಗೆರೆ **ಮೊ. ನಂ. 98444-33123, 98440-75422** ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಮೇಲ್ಕಂಡ ನನ್ನ ಕಕ್ಷಿದಾರರು ಮಹಮ್ಮದ್ ಅನ್ವರ್ ಸಾಬ್ ಬಿನ್ ಲೇಟ್ ಮಹಮ್ಮದ್ ಗೌಸ್ ಸಾಬ್ ಇವರ ಜಿ.ಪಿ.ಎ. ಹೋಲ್ಡರ್ ಆಗಿ ವೆಂಕಟೇಶ ಬಿನ್ ಹನುಮಂತಪ್ಪ ಮತ್ತು ಇತರರುಗಳ ವಿರುದ್ಧ ದಾವಣಗೆರೆಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾವಣಗೆರೆ ತಾಲ್ಲೂಕು, ತುರ್ಚಘಟ್ಟ ಗ್ರಾಮದ ಸ.ನಂ.1/1ಬಿ ವಿಸ್ತೀರ್ಣ 01 ಎಕರೆ 35 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಓ.ಎಸ್.ನಂ.314/2019 ರಂತೆ ಘೋಷಣಾತ್ಮಕ ಡಿಕ್ರಿ ಆದೇಶವನ್ನು ಪಡೆಯಲು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ಚಾಲ್ತಿಯಲ್ಲಿದ್ದಂತಹ ಸಂದರ್ಭದಲ್ಲಿ ಪ್ರಕರಣವನ್ನು ವಿಳಂಬ ಮಾಡಲು ಮತ್ತು ನಮ್ಮ ಕಕ್ಷಿದಾರರ ಹಕ್ಕಿಗೆ ಬಾಧಕ ಉಂಟು ಮಾಡುವ ದುರುದ್ದೇಶದಿಂದ ಸದರಿ ಪ್ರಕರಣದ ಪ್ರತಿವಾದಿಯರು ಬೇರೆಯವರ ಹೆಸರಿಗೆ ಷೆಡ್ಯೂಲ್ ಸ್ವತ್ತನ್ನು ವರ್ಗಾವಣೆ ಮಾಡುತ್ತಿರುವ ಬಗ್ಗೆ ನಮ್ಮ ಕಕ್ಷಿದಾರರಿಗೆ ಮಾಹಿತಿ ತಿಳಿದು ಬಂದಿರುತ್ತದೆ.

ಈ ಮೇಲೆ ಹೇಳಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯು ಚಾಲ್ತಿಯಲ್ಲಿರುವಾಗ ಯಾವುದೇ ರೀತಿ ಪರಭಾರೆ, ವಗೈರೆ ಮಾಡಿದಲ್ಲಿ ನಮ್ಮ ಕಕ್ಷಿದಾರರಿಗೆ ಯಾವುದೇ ರೀತಿಯಲ್ಲಿ ಬಂಧನಕಾರಿಯಾಗಿರುವುದಿಲ್ಲ ಹಾಗೂ ಸದರಿ ಖಾತೆದಾರರಿಗೆ ದಾವೆ ಚಾಲ್ತಿಯಲ್ಲಿರುವಾಗ ಯಾವುದೇ ರೀತಿ ಪರಭಾರೆ, ವಗೈರೆ ಮಾಡಲು ಸಂಪೂರ್ಣ ಅಧಿಕಾರ ಇರುವುದಿಲ್ಲ.

ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವುದಾಗಲೀ, ಕ್ರಯದ ಕರಾರು ಪತ್ರ, ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ, ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಉಪನೋಂದಣಾಧಿಕಾರಿಗಳವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ತುರ್ಚಘಟ್ಟ ಗ್ರಾಮದ ಸ.ನಂ.1/1ಬಿ ವಿಸ್ತೀರ್ಣ 01 ಎಕರೆ 35 ಗುಂಟೆ ಜಮೀನು.

**(ಆರ್.ಟಿ. ವಿನಯ ಕುಮಾರ), ವಕೀಲರು**
#1862/19, 4ನೇ ಮೇನ್, ಹೆಚ್.ಆರ್.ಬಿ. ನಗರ,
ಸೆಂಟ್ ಜಾನ್ಸ್ ಹೈಸ್ಕೂಲ್ ಹತ್ತಿರ, ಶಿವಕುಮಾರಸ್ವಾಮಿ ಬಡಾವಣೆ,
1ನೇ ಹಂತ ದಾವಣಗೆರೆ - 577005,
M : **98445 97838**, Gmail : ajjihallivinay@gmail.com

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಬಿ.ಆರ್. ವಿಜಯಕುಮಾರ್ ಬಿನ್ ಲೇಟ್ ರಾಮಪ್ಪ**, ವಾಸ: #362/2, ಎಂ.ಬಿ. ಕೇರಿ, ದಾವಣಗೆರೆ **ಮೊ. ನಂ. 98444-33123, 98440-75422** ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಮೇಲ್ಕಂಡ ನನ್ನ ಕಕ್ಷಿದಾರರು ಮಹಮ್ಮದ್ ಅನ್ವರ್ ಸಾಬ್ ಬಿನ್ ಲೇಟ್ ಮಹಮ್ಮದ್ ಗೌಸ್ ಸಾಬ್ ಇವರ ಜಿ.ಪಿ.ಎ. ಹೋಲ್ಡರ್ ಆಗಿ ಪಿ. ನಜೀರ್ ಅಹಮದ್ ಬಿನ್ ಮಹಮ್ಮದ್ ಖಾಸಿಂ ಸಾಬ್ ಮತ್ತು ಎನ್.ಕೆ. ಅಬ್ದುಲ್ ಘನಿ ಸಾಬ್ ಬಿನ್ ಲೇಟ್ ಕರೀಂಸಾಬ್, ತುರ್ಚಘಟ್ಟ ಗ್ರಾಮ ಇವರ ವಿರುದ್ಧ ದಾವಣಗೆರೆಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾವಣಗೆರೆ ತಾಲ್ಲೂಕು, ತುರ್ಚಘಟ್ಟ ಗ್ರಾಮದ ಸ.ನಂ.133/1 ವಿಸ್ತೀರ್ಣ 01 ಎಕರೆ ಮತ್ತು ಸ.ನಂ.133/4 ವಿಸ್ತೀರ್ಣ 06 ಗುಂಟೆ ಜಮೀನುಗಳಿಗೆ ಸಂಬಂಧಪಟ್ಟಂತೆ ಓ.ಎಸ್.ನಂ.579/2022ರಂತೆ ಘೋಷಣಾತ್ಮಕ ಡಿಕ್ರಿ ಆದೇಶವನ್ನು ಪಡೆಯಲು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ಚಾಲ್ತಿಯಲ್ಲಿದ್ದಂತಹ ಸಂದರ್ಭದಲ್ಲಿ ಸದರಿ ಪ್ರಕರಣದ ಪ್ರತಿವಾದಿಯರು ಬೇರೆಯವರ ಹೆಸರಿಗೆ ವರ್ಗಾವಣೆ ಮಾಡುತ್ತಿರುವ ಬಗ್ಗೆ ನಮ್ಮ ಕಕ್ಷಿದಾರರಿಗೆ ಮಾಹಿತಿ ತಿಳಿದು ಬಂದಿರುತ್ತದೆ.

ಈ ಮೇಲೆ ಹೇಳಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯು ಚಾಲ್ತಿಯಲ್ಲಿರುವಾಗ ಯಾವುದೇ ರೀತಿ ಪರಭಾರೆ ವಗೈರೆ ಮಾಡಿದಲ್ಲಿ ನಮ್ಮ ಕಕ್ಷಿದಾರರಿಗೆ ಯಾವುದೇ ರೀತಿಯಲ್ಲಿ ಬಂಧನಕಾರಿಯಾಗಿರುವುದಿಲ್ಲ ಹಾಗೂ ಸದರಿ ಖಾತೆದಾರರಿಗೆ ದಾವೆ ಚಾಲ್ತಿಯಲ್ಲಿರುವಾಗ ಯಾವುದೇ ರೀತಿ ಪರಭಾರೆ ವಗೈರೆ ಮಾಡಲು ಸಂಪೂರ್ಣ ಅಧಿಕಾರ ಇರುವುದಿಲ್ಲ.

ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವುದಾಗಲೀ, ಕ್ರಯದ ಕರಾರು ಪತ್ರ, ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ, ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಉಪನೋಂದಣಾಧಿಕಾರಿಗಳವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ತುರ್ಚಘಟ್ಟ ಗ್ರಾಮದ ಸ.ನಂ.133/1 ವಿಸ್ತೀರ್ಣ 01 ಎಕರೆ ಮತ್ತು ಸ.ನಂ.133/4 ವಿಸ್ತೀರ್ಣ 06 ಗುಂಟೆ ಜಮೀನು.

**(ಆರ್.ಟಿ. ವಿನಯ ಕುಮಾರ), ವಕೀಲರು**
#1862/19, 4ನೇ ಮೇನ್, ಹೆಚ್.ಆರ್.ಬಿ. ನಗರ,
ಸೆಂಟ್ ಜಾನ್ಸ್ ಹೈಸ್ಕೂಲ್ ಹತ್ತಿರ, ಶಿವಕುಮಾರಸ್ವಾಮಿ ಬಡಾವಣೆ,
1ನೇ ಹಂತ ದಾವಣಗೆರೆ - 577005,
M : **98445 97838**, Gmail : ajjihallivinay@gmail.com

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಬಿ.ಆರ್. ವಿಜಯಕುಮಾರ್ ಬಿನ್ ಲೇಟ್ ರಾಮಪ್ಪ**, ವಾಸ: #362/2, ಎಂ.ಬಿ. ಕೇರಿ, ದಾವಣಗೆರೆ **ಮೊ. ನಂ. 98444-33123, 98440-75422** ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಮೇಲ್ಕಂಡ ನನ್ನ ಕಕ್ಷಿದಾರರು **ಮಹಮ್ಮದ್ ಅನ್ವರ್ ಸಾಬ್ ಬಿನ್ ಲೇಟ್ ಮಹಮ್ಮದ್ ಗೌಸ್ ಸಾಬ್** ಇವರ ಜಿ.ಪಿ.ಎ. ಹೋಲ್ಡರ್ ಆಗಿ ಅಬ್ದುಲ್ ರೆಹಮಾನ್ ಬಿನ್ ಲೇಟ್ ಇಮಾಂ ಹುಸೇನ್ ಸಾಬ್ ಇವರ ವಿರುದ್ಧ ದಾವಣಗೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾವಣಗೆರೆ ತಾಲ್ಲೂಕು, ಚಂದ್ರೇನಹಳ್ಳಿ ಗ್ರಾಮದ ಸ.ನಂ.4/2ಬಿ ವಿಸ್ತೀರ್ಣ 01 ಎಕರೆ 06 ಗುಂಟೆ ಮತ್ತು ಸ.ನಂ.4/2ಎ ವಿಸ್ತೀರ್ಣ 01 ಎಕರೆ 01 ಗುಂಟೆ ಜಮೀನುಗಳಿಗೆ ಸಂಬಂಧಪಟ್ಟಂತೆ ಓ. ಎಸ್.ನಂ.59/2023 ರಂತೆ ಘೋಷಣಾತ್ಮಕ ಡಿಕ್ರಿ ಆದೇಶವನ್ನು ಪಡೆಯಲು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ಚಾಲ್ತಿಯಲ್ಲಿದ್ದಂತಹ ಸಂದರ್ಭದಲ್ಲಿ ಸದರಿ ಪ್ರಕರಣದ ಪ್ರತಿವಾದಿಯಾದ ಅಬ್ದುಲ್ ರೆಹಮಾನ್ ಬಿನ್ ಲೇಟ್ ಇಮಾಂ ಹುಸೇನ್ ಸಾಬ್ ಇವರು ಮೇಲ್ಕಂಡ ಜಮೀನುಗಳ ಬಗ್ಗೆ ತನ್ನ ಹೆಂಡತಿ ಮುಬೀನಾ ಖಾನಂ ಮತ್ತು ಮಕ್ಕಳಾದ ಹೀನಾ ಕೌಸರ್, ಅಫ್ಸಾನಾ, ಇಮ್ರಾನ್ ಮತ್ತು ಬೀಬೀ ಫಾತಿಮಾ ಇವರುಗಳಿಗೆ ಪಾಲು ವಿಭಾಗ ಪತ್ರವನ್ನು ಸೃಷ್ಟಿ ಮಾಡಿ, ಕಾನೂನುಬಾಹಿರವಾಗಿ ಖಾತೆ ವರ್ಗಾವಣೆಯನ್ನು ತನ್ನ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ವರ್ಗಾವಣೆ ಮಾಡಿದ್ದು, ಸದರಿ ಜಮೀನುಗಳನ್ನು ಬೇರೆ ವ್ಯಕ್ತಿಗಳಿಗೆ ಪರಭಾರೆ ಮಾಡಲು ಪ್ರಯತ್ನಪಡುತ್ತಿರುವುದು ನಮ್ಮ ಕಕ್ಷಿದಾರರಿಗೆ ತಿಳಿದುಬಂದಿರುತ್ತದೆ.

ಈ ಮೇಲೆ ಹೇಳಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯು ಚಾಲ್ತಿಯಲ್ಲಿರುವಾಗ ಯಾವುದೇ ರೀತಿ ಪರಭಾರೆ ವಗೈರೆ ಮಾಡಿದ್ದಲ್ಲಿ ಮತ್ತು ಈಗಾಗಲೇ ದಾವೆಯು ಚಾಲ್ತಿಯಲ್ಲಿದ್ದಾಗ ಸೃಷ್ಟಿ ಮಾಡಿಕೊಂಡಿರುವ ಪಾಲು ವಿಭಾಗ ಪತ್ರವು ನಮ್ಮ ಕಕ್ಷಿದಾರರಿಗೆ ಯಾವುದೇ ರೀತಿಯಲ್ಲಿ ಬಂಧನಕಾರಿಯಾಗಿರುವುದಿಲ್ಲ. ಸದರಿ ಸೃಷ್ಟಿ ಮಾಡಿಕೊಂಡಂತಹ ದಾಖಲೆಯ ಆಧಾರದ ಮೇಲೆ ಯಾವುದೇ ರೀತಿ ಪರಭಾರೆ, ವಗೈರೆ ಮಾಡಲು ಈ ಮೇಲೆ ಹೇಳಿದ ವ್ಯಕ್ತಿಗಳಿಗೆ ಸಂಪೂರ್ಣ ಅಧಿಕಾರ ಇರುವುದಿಲ್ಲ.

ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವುದಾಗಲೀ, ಕ್ರಯದ ಕರಾರು ಪತ್ರ, ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ, ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಉಪನೋಂದಣಾಧಿಕಾರಿಗಳವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಚಂದ್ರೇನಹಳ್ಳಿ ಗ್ರಾಮದ ರಿ.ಸ.ನಂ.4/2ಎ ವಿಸ್ತೀರ್ಣ 01 ಎಕರೆ 06 ಗುಂಟೆ ಮತ್ತು ಸ.ನಂ.4/2ಬಿ ವಿಸ್ತೀರ್ಣ 01 ಎಕರೆ 01 ಗುಂಟೆ ಜಮೀನುಗಳು.

**(ಆರ್.ಟಿ. ವಿನಯ ಕುಮಾರ), ವಕೀಲರು**
#1826/19, 4ನೇ ಮೇನ್, ಹೆಚ್.ಆರ್.ಬಿ. ನಗರ, ಸೆಂಟ್ ಜಾನ್ಸ್ ಹೈಸ್ಕೂಲ್ ಹತ್ತಿರ, ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ ದಾವಣಗೆರೆ - 577005, M : **98445 97838**, Gmail : ajjihallivinay@gmail.com

## ಸಾರ್ವಜನಿಕ ಪ್ರಕಟಣೆ

ಮಹಮ್ಮದ್ ಅನ್ವರ್ ಸಾಬ್ ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ರಶೀದಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಫರೀಧಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಇವರೆಲ್ಲರ ಪರವಾಗಿ ಜಿ.ಪಿ.ಎ ಹೋಲ್ಡರ್ ಶ್ರೀ ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ ವಯಸ್ಸು, ಸುಮಾರು 68 ವರ್ಷ, ವಾಸ : ಡೋರ್ ನಂ.362/2, ಎಂ.ಬಿ ಕೇರಿ, ವಸಂತ ಟಾಕೀಸ್ ಹತ್ತಿರ, ದಾವಣಗೆರೆ.

ಈ ಮೇಲ್ಕಂಡ ವಿಳಾಸದ ಖಾಯಂ ನಿವಾಸಿಯಾದ ನಾವುಗಳು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಏನೆಂದರೆ,

**1)** ಸರ್ವೆ ನಂ. 88/4ಎಪಿ, 88/1, 88/2, 88/3, 88/4ಎ, 88/4ಬಿ, 1 ಎಕರೆ ತುರ್ಚಘಟ್ಟ ಗ್ರಾಮ.

ಮೇಲ್ಕಂಡ ಆಸ್ತಿಗಳು ವಾದಿಗಳ ಸ್ವಂತ ಆಸ್ತಿಗಳಾಗಿದ್ದು ನಮಗೆ ಸೇರಿದ ಆಸ್ತಿಗಳಾಗಿರುತ್ತವೆ. ಈ ಆಸ್ತಿಗಳ ಮೇಲೆ ಒಂದನೇ ಹೆಚ್ಚುವರಿ ಕಿರಿಯ ವಿಭಾಗ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಂ.223/2024 ಎಂದು ದಾವೆಯನ್ನು ಹಾಕಿದ್ದು ಇರುತ್ತದೆ. ಆದ ಕಾರಣ ಸದರಿ ದಾವಾಸ್ತಿಗಳನ್ನು ಪ್ರತಿವಾದಿಯರಾದ ಮಹಮ್ಮದ್ ಬಾಷ ತಂದೆ ದಸ್ತಗೀರ್‌ಸಾಬ್ ಹಾಗೂ ಇತರರು, ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು, ಈ ಸಂಬಂಧ ಯಾರೇ ಆಗಲಿ ಖರೀದಿಸಲು ಮುಂದೆ ಬಂದರೆ ನಾವುಗಳು ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಬೇಕಾಗುತ್ತದೆ.

**ಕಕ್ಷಿದಾರರು :** ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ

ಸಹಿ /- **ಮಂಜುನಾಥ್ ಪಿ., ವಕೀಲರು**
KAR-1260/2010, ಎಸ್.ಎಸ್. ಲೇಔಟ್ ಬಿ ಬ್ಲಾಕ್,
4ನೇ ಮೇನ್, ಸಪ್ತಗಿರಿ ಸ್ಕೂಲ್ ದಾವಣಗೆರೆ. **ಮೊ. : 93807 88478**

## ಸಾರ್ವಜನಿಕ ಪ್ರಕಟಣೆ

ರಶೀದಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಫರೀಧಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಇವರೆಲ್ಲರ ಪರವಾಗಿ ಜಿ.ಪಿ.ಎ ಹೋಲ್ಡರ್ ಶ್ರೀ ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ ವಯಸ್ಸು, ಸುಮಾರು 68 ವರ್ಷ, ವಾಸ : ಡೋರ್ ನಂ.362/2, ಎಂ.ಬಿ ಕೇರಿ, ವಸಂತ ಟಾಕೀಸ್ ಹತ್ತಿರ, ದಾವಣಗೆರೆ.

ಈ ಮೇಲ್ಕಂಡ ವಿಳಾಸದ ಖಾಯಂ ನಿವಾಸಿಯಾದ ನಾವುಗಳು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಏನೇಂದರೆ.

**1)** ಸರ್ವೇ ನಂ.1/1ಎ, ಒಟ್ಟು 4 ಎಕರೆ 24 ಗುಂಟೆಯಲ್ಲಿ ಹೊರತುಪಡಿಸಿ 2 ಎಕರೆ 6 ಗುಂಟೆ ತುರ್ಚಘಟ್ಟ ಗ್ರಾಮ.

ಈ ಮೇಲ್ಕಂಡ ಆಸ್ತಿಗಳು ವಾದಿಗಳ ಸ್ವಂತ ಆಸ್ತಿಗಳಾಗಿದ್ದು ನಮಗೆ ಸೇರಿದ ಆಸ್ತಿಗಳಾಗಿರುತ್ತವೆ. ಈ ಆಸ್ತಿಗಳ ಮೇಲೆ 4ನೇ ಹೆಚ್ಚುವರಿ ಕಿರಿಯ ವಿಭಾಗ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಂ.222/2024 ಎಂದು ದಾವೆಯನ್ನು ಹಾಕಿದ್ದು ಇರುತ್ತದೆ. ಆದ ಕಾರಣ ಸದರಿ ಧಾವಾಸ್ತಿಗಳನ್ನು ಪ್ರತಿವಾದಿಯರಾದ ಜಿ.ಎಸ್. ಪರ್ವತಪ್ಪ ತಂದೆ ಗುರುಶಿದ್ದಳ ಸಿದ್ದಪ್ಪ ಹಾಗೂ ಇತರರು, ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು ಈ ಸಂಬಂಧ ಯಾರೇ ಆಗಲೀ ಖರೀದಿಸಲು ಮುಂದೆ ಬಂದರೆ ನಾವುಗಳು ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಬೇಕಾಗುತ್ತದೆ.

**ಕಕ್ಷಿದಾರರು :** ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ

ಸಹಿ /- **ಮಂಜುನಾಥ್ ಪಿ., ವಕೀಲರು**
KAR-1260/2010, ಎಸ್.ಎಸ್. ಲೇಔಟ್ ಬಿ ಬ್ಲಾಕ್,
4ನೇ ಮೇನ್, ಸಪ್ತಗಿರಿ ಸ್ಕೂಲ್ ದಾವಣಗೆರೆ. **ಮೊ. : 93807 88478**

## ಸಾರ್ವಜನಿಕ ಪ್ರಕಟಣೆ

ಮಹಮ್ಮದ್ ಅನ್ವರ್ ಸಾಬ್ ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ರಶೀದಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಫರೀಧಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಇವರೆಲ್ಲರ ಪರವಾಗಿ ಜಿ.ಪಿ.ಎ ಹೋಲ್ಡರ್ ಶ್ರೀ ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ ವಯಸ್ಸು, ಸುಮಾರು 68 ವರ್ಷ, ವಾಸ : ಡೋರ್ ನಂ.362/2, ಎಂ.ಬಿ ಕೇರಿ, ವಸಂತ ಟಾಕೀಸ್ ಹತ್ತಿರ, ದಾವಣಗೆರೆ.

ಈ ಮೇಲ್ಕಂಡ ವಿಳಾಸದ ಖಾಯಂ ನಿವಾಸಿಯಾದ ನಾವುಗಳು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಏನೆಂದರೆ.

**1)** ಸರ್ವೇ ನಂ.1/1ಎ, ಒಟ್ಟು 4 ಎಕರೆ 24 ಗುಂಟೆಯಲ್ಲಿ ಹೊರತುಪಡಿಸಿ 2 ಎಕರೆ 8 ಗುಂಟೆ. ತುರ್ಚಘಟ್ಟ ಗ್ರಾಮ.

ಈ ಮೇಲ್ಕಂಡ ಆಸ್ತಿಗಳು ವಾದಿಗಳ ಸ್ವಂತ ಆಸ್ತಿಗಳಾಗಿದ್ದು ನಮಗೆ ಸೇರಿದ ಆಸ್ತಿಗಳಾಗಿರುತ್ತವೆ. ಈ ಆಸ್ತಿಗಳ ಮೇಲೆ ಒಂದನೇ ಹೆಚ್ಚುವರಿ ಕಿರಿಯ ವಿಭಾಗ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಂ.220/2024 ಎಂದು ದಾವೆಯನ್ನು ಹಾಕಿದ್ದು ಇರುತ್ತದೆ. ಆದ ಕಾರಣ ಸದರಿ ದಾವಾಸ್ತಿಗಳನ್ನು ಪ್ರತಿವಾದಿಯರಾದ ಜಮಲುದ್ದೀನ್ ತಂದೆ ಲೇಟ್ ಜಾನ್‌ಸಾಬ್ ಹಾಗೂ ಇತರರು, ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು ಈ ಸಂಬಂಧ ಯಾರೇ ಆಗಲೀ ಖರೀದಿಸಲು ಮುಂದೆ ಬಂದರೆ ನಾವುಗಳು ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಬೇಕಾಗುತ್ತದೆ.

**ಕಕ್ಷಿದಾರರು :** ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ

ಸಹಿ /- **ಮಂಜುನಾಥ್ ಪಿ., ವಕೀಲರು**
KAR-1260/2010, ಎಸ್.ಎಸ್. ಲೇಔಟ್ ಬಿ ಬ್ಲಾಕ್,
4ನೇ ಮೇನ್, ಸಪ್ತಗಿರಿ ಸ್ಕೂಲ್ ದಾವಣಗೆರೆ. **ಮೊ. : 93807 88478**

## ಸಾರ್ವಜನಿಕ ಪ್ರಕಟಣೆ

ಮಹಮ್ಮದ್ ಅನ್ವರ್ ಸಾಬ್ ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ರಶೀದಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಫರೀಧಬಾನು ತಂದೆ ಲೇಟ್ ಮಹಮ್ಮದ್ ಗೌಸುಸಾಬ್, ಇವರೆಲ್ಲರ ಪರವಾಗಿ ಜಿ.ಪಿ.ಎ ಹೋಲ್ಡರ್ ಶ್ರೀ ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ ವಯಸ್ಸು, ಸುಮಾರು 68 ವರ್ಷ, ವಾಸ : ಡೋರ್ ನಂ.362/2, ಎಂ.ಬಿ ಕೇರಿ, ವಸಂತ ಟಾಕೀಸ್ ಹತ್ತಿರ, ದಾವಣಗೆರೆ.

ಈ ಮೇಲ್ಕಂಡ ವಿಳಾಸದ ಖಾಯಂ ನಿವಾಸಿಯಾದ ನಾವುಗಳು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಏನೆಂದರೆ.

**1)** ಸರ್ವೆ ನಂ. 88/5, 88/6, 88/7, 88/8, 88/9, 88/10, 88/11, 88/12, 88/13, 88/14, 88/15, 88/16, 88/17, 88/18, 88/19, 2 ಎಕರೆ 20 ಗುಂಟೆ ತುರ್ಚಘಟ್ಟ ಗ್ರಾಮ.

ಈ ಮೇಲ್ಕಂಡ ಆಸ್ತಿಗಳು ವಾದಿಗಳ ಸ್ವಂತ ಆಸ್ತಿಗಳಾಗಿದ್ದು, ನಮಗೆ ಸೇರಿದ ಆಸ್ತಿಗಳಾಗಿರುತ್ತವೆ. ಈ ಆಸ್ತಿಗಳ ಮೇಲೆ ಒಂದನೇ ಹೆಚ್ಚುವರಿ ಕಿರಿಯ ವಿಭಾಗ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಂ.221/2024 ಎಂದು ದಾವೆಯನ್ನು ಹಾಕಿದ್ದು ಇರುತ್ತದೆ. ಆದ ಕಾರಣ ಸದರಿ ದಾವಾಸ್ತಿಗಳನ್ನು ಪ್ರತಿವಾದಿಯರಾದ ಸಲಾಮ್‌ಸಾಬ್ ತಂದೆ ನಭಿಸಾಬ್ ಹಾಗೂ ಇತರರು, ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು, ಈ ಸಂಬಂಧ ಯಾರೇ ಆಗಲೀ ಖರೀದಿಸಲು ಮುಂದೆ ಬಂದರೆ ನಾವುಗಳು ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಬೇಕಾಗುತ್ತದೆ.

**ಕಕ್ಷಿದಾರರು :** ಬಿ.ಆರ್ ವಿಜಯಕುಮಾರ್ ತಂದೆ ಲೇಟ್ ರಾಮಪ್ಪ

ಸಹಿ /- **ಮಂಜುನಾಥ್ ಪಿ., ವಕೀಲರು**
KAR-1260/2010, ಎಸ್.ಎಸ್. ಲೇಔಟ್ ಬಿ ಬ್ಲಾಕ್,
4ನೇ ಮೇನ್, ಸಪ್ತಗಿರಿ ಸ್ಕೂಲ್ ದಾವಣಗೆರೆ. **ಮೊ. : 93807 88478**

ಬೆಳವನೂರು, ತುರ್ಚಘಟ್ಟ, ಚಂದ್ರೇನಹಳ್ಳಿ, ಗಂಡಮುಕ್ತೇನಹಳ್ಳಿ, ಬುಳ್ಳಾಪುರ ಗ್ರಾಮಗಳಲ್ಲಿ ಸದರಿ ಸರ್ವೆ ನಂಬರ್ ಜಮೀನುಗಳಲ್ಲದೆ ಬೇರೆ ಸರ್ವೆ ನಂಬರ್ ಜಮೀನುಗಳ ಮೇಲೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದರಿಂದ ಸದರಿ ಜಮೀನುಗಳಲ್ಲಿ ಯಾರಾದರೂ ಕ್ರಯವಾಗಲೀ, ದಾನ, ವಗೈರೆ ಇತರೆ ವಹಿವಾಟು ನಡೆಸಬಾರದೆಂದು, ನಡೆಸಿದ್ದಲ್ಲಿ ನ್ಯಾಯಾಲಯ ಶಿಕ್ಷೆಗೆ ಗುರಿಯಾಗುತ್ತೀರಿ ಎಂಬ ಅಂಶವನ್ನು ಸಾರ್ವಜನಿಕರ ಗಮನಕ್ಕೆ ತರಲು ಬಯಸುತ್ತೇನೆ.

**-ಬಿ.ಆರ್. ವಿಜಯಕುಮಾರ್** ಬಿನ್ ಲೇಟ್ ರಾಮಪ್ಪ,
ಸದರಿ ಜಮೀನುಗಳ ಮೂಲ ಖಾತೆದಾರರಿಂದ ಜಿ.ಪಿ.ಎ ಪಡೆದ ಜಿ.ಪಿ.ಎ. ಹೋಲ್ಡರ್
ವಾಸ: # 362/2, ಎಂ.ಬಿ. ಕೇರಿ, ವಸಂತ ಟಾಕೀಸ್ ರಸ್ತೆ, ದಾವಣಗೆರೆ, **ಮೊ. ನಂ. 98444-33123, 98440-75422**

# ಇಂದು ರಾಷ್ಟ್ರೀಯ ಶಿಕ್ಷಣ ದಿನ : ಶಿಕ್ಷಕರ ಪಾತ್ರದಲ್ಲಿನ ಬದಲಾವಣೆಗಳು - ಸವಾಲುಗಳು

ರಾಷ್ಟ್ರೀಯ ಶಿಕ್ಷಣ ದಿನವನ್ನು ವಾರ್ಷಿಕವಾಗಿ ನವೆಂಬರ್ 11 ರಂದು ಆಚರಿಸಲಾಗುತ್ತದೆ. ಭಾರತದ ಮೊದಲ ಶಿಕ್ಷಣ ಮಂತ್ರಿ ಮತ್ತು ದೇಶದ ಸ್ವಾತಂತ್ರ್ಯ ಹೋರಾಟದ ಪ್ರಮುಖ ವ್ಯಕ್ತಿ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ ಜನ್ಮ ದಿನವನ್ನು ಸ್ಮರಿಸಲಾಗುತ್ತದೆ. ಆಧುನಿಕ ಭಾರತಕ್ಕಾಗಿ ಆಜಾದ್ ಅವರ ದೃಷ್ಟಿಕೋನವು ಶಿಕ್ಷಣವನ್ನು ರಾಷ್ಟ್ರೀಯ ಅಭಿವೃದ್ಧಿಯ ಮುಂಚೂಣಿಯಲ್ಲಿ ಇರಿಸಿತು, ಪ್ರಗತಿಶೀಲ ಸಮಾಜಕ್ಕೆ ರಾಷ್ಟ್ರೀಯ ಅಭಿವೃದ್ಧಿಯ ಸಾಮರ್ಥ್ಯವನ್ನು ಮೂಲಾಧಾರವೆಂದು ಗುರುತಿಸಲ್ಪಟ್ಟಿದೆ.

**ನವೆಂಬರ್ 11 ಏಕೆ ಮಹತ್ವದ್ದಾಗಿದೆ ? :** ನವೆಂಬರ್ 11, 1888 ರಂದು, ಮೌಲಾನಾ ಆಜಾದ್ ಮೆಕ್ಕಾದಲ್ಲಿ ಜನಿಸಿದರು ಮತ್ತು 1947 ರಿಂದ 1958 ರವರೆಗೆ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದರು. ಅವರ ಕೊಡುಗೆಗಳು ಭಾರತದ ಶೈಕ್ಷಣಿಕ ಚೌಕಟ್ಟಿಗೆ ಅಡಿಪಾಯವನ್ನು ಹಾಕಿದವು. ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಣವು ವಹಿಸುವ ಪ್ರಮುಖ ಪಾತ್ರವನ್ನು ಸ್ಮರಿಸಲು ಮತ್ತು ಅಂಗೀಕರಿಸಲು ಭಾರತ ಸರ್ಕಾರವು 2008 ರಲ್ಲಿ ಈ ದಿನವನ್ನು ರಾಷ್ಟ್ರೀಯ ಶಿಕ್ಷಣ ದಿನವೆಂದು ಘೋಷಿಸಿತು. ಈ ದಿನದ ಆಚರಣೆಯು ಹೊಸದಾಗಿ ಸ್ವತಂತ್ರ ಭಾರತದಲ್ಲಿ ಏಕತೆ, ಉನ್ನತಿ ಮತ್ತು ಸಾಮಾಜಿಕ ಸಮಾನತೆಯನ್ನು ಬೆಳೆಸುವ ಶಿಕ್ಷಣದ ಶಕ್ತಿಯಲ್ಲಿ ಆಜಾದ್ ಅವರ ನಂಬಿಕೆಯನ್ನು ಒತ್ತಿ ಹೇಳುತ್ತದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ದಂತಹ ಪ್ರತಿಷ್ಠಿತ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು .

**ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ ಪರಂಪರೆ :** ಗುಣಮಟ್ಟದ ಶಿಕ್ಷಣವು ಭಾರತದ ಸಬಲೀಕರಣಕ್ಕೆ ಪ್ರಮುಖವಾದುದು ಎಂದು ಗುರುತಿಸಿದ ದೂರದೃಷ್ಟಿಯ ನಾಯಕ ಆಜಾದ್ . ಅವರ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಅದರ ನಾಗರಿಕರು ಜ್ಞಾನಕ್ಕೆ ಸಮಾನ ಪ್ರವೇಶವನ್ನು ಪಡೆದಾಗ ಮಾತ್ರ ರಾಷ್ಟ್ರವು ಪ್ರಗತಿ ಹೊಂದುತ್ತದೆ ಎಂದು ಅವರು ನಂಬಿದ್ದರು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಮತ್ತು ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣಕ್ಕಾಗಿ ಆಜಾದ್ ಅವರ ಪ್ರತಿಪಾದನೆಯು ಇಂದಿಗೂ ಭಾರತದ ಶೈಕ್ಷಣಿಕ ತತ್ತ್ವಶಾಸ್ತ್ರಕ್ಕೆ ಅಡಿಪಾಯವಾಗಿದೆ. ಜಾತಿ, ಪಂಗಡ ಅಥವಾ ಲಿಂಗವನ್ನು ಲೆಕ್ಕಿಸದೆ ಎಲ್ಲರಿಗೂ ಶಿಕ್ಷಣದ ಮೇಲೆ ಅವರ ಒತ್ತು, ಭಾರತದ ಆಧುನಿಕ ಶೈಕ್ಷಣಿಕ ಸುಧಾರಣೆಗಳಲ್ಲಿ ಅವರ ಪ್ರಭಾವವು ಪ್ರತಿಧ್ವನಿಸುತ್ತಲೇ ಇರುವ ನಾಯಕನಾಗಿ ಅವರನ್ನು ಇರಿಸಿತು.


**NEP 2020: ಶಿಕ್ಷಣದಲ್ಲಿ ಪ್ರಮುಖ ಸುಧಾರಣೆಗಳು :** ಇತ್ತೀಚಿನ ವರ್ಷಗಳಲ್ಲಿ, ಭಾರತದ ಶೈಕ್ಷಣಿಕ ಚೌಕಟ್ಟು ಗಮನಾರ್ಹ ಬದಲಾವಣೆಗಳಿಗೆ ಒಳಗಾಗಿದೆ, ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ಒಂದು ಪ್ರಮುಖ ಕ್ಷಣವಾಗಿದೆ. ಈ ನೀತಿಯು ಮೌಲಾನಾ ಆಜಾದ್ ಅವರಂತಹ ನಾಯಕರ ದೃಷ್ಟಿಕೋನವನ್ನು ನಿರ್ಮಿಸುತ್ತದೆ, ವೇಗವಾಗಿ ಬದಲಾಗುತ್ತಿರುವ ಪ್ರಪಂಚದ ಅಗತ್ಯಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ.

**NEP 2020 ರ ಅಡಿಯಲ್ಲಿ ಶಿಕ್ಷಕರ ಪಾತ್ರದಲ್ಲಿನ ಪ್ರಮುಖ ಬದಲಾವಣೆಗಳು :** NEP 2020 ಪರಿಚಯಿಸಿದ ಬದಲಾವಣೆಗಳನ್ನು ಕಾರ್ಯಗತಗೊಳಿಸುವಲ್ಲಿ ಶಿಕ್ಷಕರು ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ನೀತಿಯು ಅವರ ಜವಾಬ್ದಾರಿಗಳು ಮತ್ತು ವೃತ್ತಿಪರ ಬೆಳವಣಿಗೆಯನ್ನು ಗಮನಾರ್ಹವಾಗಿ ಮರು ವ್ಯಾಖ್ಯಾನಿಸುತ್ತದೆ.

**ಕಲಿಕೆಯನ್ನು ಸುಗಮಗೊಳಿಸುವವ :** NEP 2020 ಶಿಕ್ಷಕರು ಸಾಂಪ್ರದಾಯಿಕ ಬೋಧನಾ ವಿಧಾನಗಳಿಂದ ದೂರ ಸರಿಯುವ ಅಗತ್ಯವನ್ನು ಒತ್ತಿ ಹೇಳುತ್ತದೆ ಮತ್ತು ಕಲಿಕೆಯ ಸಹಾಯಕರಾಗುತ್ತಾರೆ. ಇದರರ್ಥ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ಅಂತರ್‌ಶಿಸ್ತೀಯ ಕಲಿಕೆಯನ್ನು ಬೆಳೆಸುವ ಹೊಸ ಬೋಧನಾ ತಂತ್ರಗಳನ್ನು ಅಳವಡಿಸಿಕೊಳ್ಳುವುದು . ಶಿಕ್ಷಕರು ಇನ್ನು ಮುಂದೆ ವಿಷಯವನ್ನು ತಲುಪಿಸುವಲ್ಲಿ ಮಾತ್ರ ಗಮನಹರಿಸಬೇಕೆಂದು ನಿರೀಕ್ಷಿಸಲಾಗುವುದಿಲ್ಲ. ಆದರೆ ತೊಡಗಿಸಿಕೊಳ್ಳುವ, ವಿಚಾರಣೆ-ಆಧಾರಿತ ಕಲಿಕೆಯ ಪ್ರಕ್ರಿಯೆಯ ಮೂಲಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಪ್ರೋತ್ಸಾಹಿಸಲಾಗುತ್ತದೆ.

**ನಿರಂತರ ವೃತ್ತಿಪರ ಅಭಿವೃದ್ಧಿ (CPD) :** NEP ಯ ಒಂದು ಮೂಲಾಧಾರವೆಂದರೆ ಶಿಕ್ಷಕರು ಜೀವಮಾನವಿಡೀ ಕಲಿಯುವವರಾಗಿ ಉಳಿಯುತ್ತಾರೆ ಎಂದು ಖಚಿತಪಡಿಸಿಕೊಳ್ಳುವುದು. ಹೊಸ ಬೋಧನಾ ವಿಧಾನಗಳು, ಡಿಜಿಟಲ್ ಪರಿಕರಗಳು ಮತ್ತು ವಿಷಯ-ನಿರ್ದಿಷ್ಟ ಬದಲಾವಣೆಗಳಲ್ಲಿ ನಿಯಮಿತ ತರಬೇತಿಯೊಂದಿಗೆ ಶಿಕ್ಷಣ ತಜ್ಞರಿಗೆ ನಡೆಯುತ್ತಿರುವ ವೃತ್ತಿಪರ ಅಭಿವೃದ್ಧಿಯ ಅಗತ್ಯವಿರುತ್ತದೆ. CPD ಶಿಕ್ಷಕರ ಕೌಶಲ್ಯಗಳನ್ನು ಸುಧಾರಿಸುವುದಲ್ಲದೆ, ಅವರು ವೈವಿಧ್ಯಮಯ ತರಗತಿಯ ಪರಿಸರವನ್ನು ನಿರ್ವಹಿಸಲು ಉತ್ತಮವಾಗಿ ಸಜ್ಜುಗೊಂಡಿರುವುದನ್ನು ಖಚಿತಪಡಿಸುತ್ತದೆ.

**ಬಹುಶಿಸ್ತೀಯ ಸಹಯೋಗಕ್ಕೆ ಬದಲಾವಣೆ :** ಬಹುಶಿಸ್ತೀಯ ಶಿಕ್ಷಣದತ್ತ ಸಾಗುತ್ತಿದ್ದಂತೆ, ಹೆಚ್ಚು ಸಮಗ್ರ ಕಲಿಕೆಯ ಅನುಭವವನ್ನು ರಚಿಸಲು ಶಿಕ್ಷಕರನ್ನು ವಿಷಯಗಳಾದ್ಯಂತ ಸಹಯೋಗಿಸಲು ಪ್ರೋತ್ಸಾಹಿಸಲಾಗುತ್ತದೆ. ಈ ಸಹಯೋಗವು ವಿವಿಧ ಅಧ್ಯಯನ ಕ್ಷೇತ್ರಗಳ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ , ಆಧುನಿಕ ಪ್ರಪಂಚದ ಸಂಕೀರ್ಣತೆಗಳಿಗೆ ದಾರಿತೋರಿಸಲು ಬಳಸುವ ಪ್ರಮುಖ ಕೌಶಲ್ಯವಾಗಿದೆ.




**ತಂತ್ರಜ್ಞಾನ-ವರ್ಧಿತ ಬೋಧನೆ :** ಶಿಕ್ಷಣದಲ್ಲಿ ಡಿಜಿಟಲ್ ಉಪಕರಣಗಳ ಏಕೀಕರಣವು NEP ಯ ಪ್ರಮುಖ ಕೇಂದ್ರವಾಗಿದೆ. ಸಂಯೋಜಿತ ಕಲಿಕೆಯ ಅನುಭವಗಳನ್ನು ನೀಡಲು ಶಿಕ್ಷಕರು ಡಿಜಿಟಲ್ ತಂತ್ರಜ್ಞಾನಗಳಲ್ಲಿ ಪ್ರವೀಣರಾಗುತ್ತಾರೆ ಎಂದು ನಿರೀಕ್ಷಿಸಲಾಗಿದೆ. ದೀಕ್ಷಾ, ಆನ್‌ಲೈನ್ ಸಂಪನ್ಮೂಲಗಳು ಮತ್ತು ಹೊಂದಾಣಿಕೆಯ ಕಲಿಕೆಯ ತಂತ್ರಜ್ಞಾನಗಳಂತಹ ವೇದಿಕೆಗಳ ಬಳಕೆಯು ಶಿಕ್ಷಕರು ನವೀನ ವಿಧಾನಗಳ ಮೂಲಕ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಬಹುದು ಎಂದು ಖಚಿತಪಡಿಸುತ್ತದೆ .

**NEP ನಲ್ಲಿ ಶಿಕ್ಷಕರ ಸವಾಲುಗಳು :** ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ಭಾರತದ ಶಿಕ್ಷಣ ವ್ಯವಸ್ಥೆಯನ್ನು ಪರಿವರ್ತಿಸುವ ಗುರಿಯನ್ನು ಹೊಂದಿರುವ ಹಲವಾರು ಸಕಾರಾತ್ಮಕ ಸುಧಾರಣೆಗಳನ್ನು ಪರಿಚಯಿಸುತ್ತದೆ, ಆದರೆ ಇದು ಶಿಕ್ಷಕರಿಗೆ ಗಮನಾರ್ಹ ಸವಾಲುಗಳನ್ನು ಒದಗಿಸುತ್ತದೆ. ಅವರು ಹೊಸ ಪಾತ್ರಗಳು ಮತ್ತು ನಿರೀಕ್ಷೆಗಳಿಗೆ ಹೊಂದಿಕೊಂಡಂತೆ, ಅನೇಕ ಶಿಕ್ಷಣ ತಜ್ಞರು ವೃತ್ತಿಪರ ಅಭಿವೃದ್ಧಿ, ಕೆಲಸದ ಹೊರೆ ಮತ್ತು ಸಂಪನ್ಮೂಲಗಳ ಪ್ರವೇಶಕ್ಕೆ ಸಂಬಂಧಿಸಿದ ತೊಂದರೆಗಳನ್ನು ಎದುರಿಸುತ್ತಾರೆ.

**ಪಠ್ಯಕ್ರಮದ ಅಳವಡಿಕೆ ಮತ್ತು ನಮ್ಯತೆ :** ಬಹುಶಿಸ್ತೀಯ ಮತ್ತು ಸಮಗ್ರ ಶಿಕ್ಷಣದ ಮೇಲೆ ನೀತಿಯ ಗಮನವು ಶಿಕ್ಷಕರು ಹೊಸ ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಆದಾಗ್ಯೂ, ಸಾಂಪ್ರದಾಯಿಕ ವಿಷಯ-ಕೇಂದ್ರಿತ ಬೋಧನೆಗೆ ಬಳಸುವ ಶಿಕ್ಷಕರಿಗೆ ಈ ಬದಲಾವಣೆಯು ಸವಾಲಾಗಬಹುದು.

● **ವಿಷಯ ಪಾಂಡಿತ್ಯ :** ಶಿಕ್ಷಕರು ತಮ್ಮ ಪರಿಣಿತಿಯ ಕ್ಷೇತ್ರಗಳ ಹೊರಗಿರುವ ಬಹು ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ನಿರೀಕ್ಷೆಯಿದೆ. ಬಹುಶಿಸ್ತೀಯ ಸೂಚನೆಯ ಈ ಅಗತ್ಯವು ಶಿಕ್ಷಕರು ತಮ್ಮ ಜ್ಞಾನದ ನೆಲೆಯನ್ನು ವಿಸ್ತರಿಸಲು ಮತ್ತು ವಿವಿಧ ವಿಷಯ ಕ್ಷೇತ್ರಗಳಲ್ಲಿ ಗೆಳೆಯರೊಂದಿಗೆ ಸಹಕರಿಸುವ ಅಗತ್ಯವಿದೆ .

● **ಸಂಪನ್ಮೂಲಗಳ ಕೊರತೆ :** ಅನೇಕ ಶಿಕ್ಷಕರು ಹೊಸ ಪಠ್ಯಕ್ರಮ ರಚನೆಯನ್ನು ಬೆಂಬಲಿಸುವ ಬೋಧನಾ ಸಾಮಗ್ರಿಗಳು ಅಥವಾ ಸಂಪನ್ಮೂಲಗಳಿಗೆ ಪ್ರವೇಶವನ್ನು ಹೊಂದಿಲ್ಲ. ಸರಿಯಾದ ಬೆಂಬಲವಿಲ್ಲದೆ, NEP ಯ ದೃಷ್ಟಿಗೆ ಅನುಗುಣವಾಗಿ ಪಾಠಗಳನ್ನು ನೀಡಲು ಅವರಿಗೆ ಕಷ್ಟವಾಗುತ್ತದೆ

**ಹೆಚ್ಚಿದ ಜವಾಬ್ದಾರಿಗಳು ಮತ್ತು ನಿರೀಕ್ಷೆಗಳು :** ಮಾರ್ಗದರ್ಶಕರು ಮತ್ತು ಸುಗಮಗೊಳಿಸುವವರನ್ನೂ ಒಳಗೊಂಡಂತೆ ಬಹು ಪಾತ್ರಗಳನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸುತ್ತದೆ. ಇದು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿದ್ದರೂ, ಶಿಕ್ಷಕರು ಈಗಾಗಲೇ ಹೊಂದಿರುವ ಜವಾಬ್ದಾರಿಗಳನ್ನು ಇದು ಸೇರಿಸುತ್ತದೆ.

**ಮಾರ್ಗದರ್ಶನ ಕರ್ತವ್ಯಗಳು :** ಶಿಕ್ಷಕರ ಪಾತ್ರವು ಶೈಕ್ಷಣಿಕ ಸೂಚನೆಯನ್ನು ಮೀರಿ ವಿಸ್ತರಿಸಿದೆ. ಶಿಕ್ಷಕರು ಈಗ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಮಾರ್ಗದರ್ಶನ ನೀಡುತ್ತಾರೆ, ಇದಕ್ಕೆ ಹೆಚ್ಚುವರಿ ಸಮಯ, ಶ್ರಮ ಮತ್ತು ವಿಶೇಷ ತರಬೇತಿಯ ಅಗತ್ಯವಿರುತ್ತದೆ .

**ಭಾಷಾ ತಡೆಗಳು :** ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಗಳ ಬಳಕೆಯನ್ನು ಗ್ರೇಡ್ 5 ರವರೆಗಿನ ಬೋಧನಾ ಮಾಧ್ಯಮವಾಗಿ ಉತ್ತೇಜಿಸುತ್ತದೆ, ಇದು ಶಿಕ್ಷಕರಿಗೆ ಸವಾಲುಗಳನ್ನು ಒಡ್ಡುತ್ತದೆ.

● **ಭಾಷಾ ವೈವಿಧ್ಯತೆ :** ಭಾರತದ ಭಾಷಾ ವೈವಿಧ್ಯತೆ ಎಂದರೆ ಅನೇಕ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಮಾತನಾಡುವ ಪ್ರಾದೇಶಿಕ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿಲ್ಲದಿರಬಹುದು. ಒಂದು ಭಾಷೆಯಲ್ಲಿ ಕಲಿಸಲು ತರಬೇತಿ ಪಡೆದ ಶಿಕ್ಷಕರು ಮತ್ತೊಂದು ಭಾಷೆಗೆ ಹೊಂದಿಕೊಳ್ಳಲು ಹೆಣಗಾಡಬಹುದು, ಇದು ಗುಣಮಟ್ಟದ ಶಿಕ್ಷಣವನ್ನು ನೀಡುವ ಅವರ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ .

● **ಬಹುಭಾಷಾ ಶಿಕ್ಷಣಶಾಸ್ತ್ರದಲ್ಲಿ ತರಬೇತಿ :** ಬಹು ಭಾಷೆಗಳಲ್ಲಿ ಕಲಿಸಲು ಅಗತ್ಯವಾದ ಕೌಶಲ್ಯಗಳೊಂದಿಗೆ ಶಿಕ್ಷಕರನ್ನು ಸಜ್ಜುಗೊಳಿಸಲು ವ್ಯಾಪಕವಾದ ತರಬೇತಿಯ ಅವಶ್ಯಕತೆಯಿದೆ ಮತ್ತು ಈ ಪ್ರಕ್ರಿಯೆಗೆ ಸಮಯ ಮತ್ತು ಸಂಪನ್ಮೂಲಗಳ ಅಗತ್ಯವಿರುತ್ತದೆ .

**ಗ್ರಾಮೀಣ ಮತ್ತು ಕಡಿಮೆ ಸಂಪನ್ಮೂಲ ಹೊಂದಿರುವ ಶಾಲೆಗಳಿಗೆ ಬೆಂಬಲದ ಕೊರತೆ :** ನೀತಿಯ ಮಹತ್ವಾಕಾಂಕ್ಷೆಯ ಸುಧಾರಣೆಗಳಿಗೆ ಗಮನಾರ್ಹವಾದ ಮೂಲಸೌಕರ್ಯ ಸುಧಾರಣೆಗಳ ಅಗತ್ಯವಿರುತ್ತದೆ, ಇದು ಕಡಿಮೆ ಸಂಪನ್ಮೂಲ ಅಥವಾ ಗ್ರಾಮೀಣ ಶಾಲೆಗಳಲ್ಲಿ ಕಾರ್ಯಗತಗೊಳಿಸಲು ಕಷ್ಟಕರವಾಗಿರುತ್ತದೆ.

● **ಮೂಲಸೌಕರ್ಯದ ಕೊರತೆ :** ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವ ಪ್ರದೇಶಗಳಲ್ಲಿ ಡಿಜಿಟಲ್ ಕಲಿಕೆ, ವೃತ್ತಿಪರ ತರಬೇತಿ ಅಥವಾ ಹೊಂದಿಕೊಳ್ಳುವ ಪಠ್ಯಕ್ರಮದ ಬದಲಾವಣೆಗಳನ್ನು ಕಾರ್ಯಗತಗೊಳಿಸುವುದು ಗಮನಾರ್ಹ ಸವಾಲಾಗಿದೆ. ಈ ಪ್ರದೇಶಗಳಲ್ಲಿನ ಶಿಕ್ಷಕರು NEP 2020 ನಿಗದಿಪಡಿಸಿದ ನಿರೀಕ್ಷೆಗಳನ್ನು ಪೂರೈಸಲು ಹೆಣಗಾಡಬಹುದು.

● **ಶಿಕ್ಷಕರ ಕೊರತೆ :** ಅನೇಕ ಗ್ರಾಮೀಣ ಪ್ರದೇಶಗಳು ಅರ್ಹ ಶಿಕ್ಷಕರ ಕೊರತೆಯಿಂದ ಬಳಲುತ್ತಿದ್ದು, ನೀತಿಯಿಂದ ಕಡ್ಡಾಯಗೊಳಿಸಿದ ಸಮಗ್ರ ಬದಲಾವಣೆಗಳನ್ನು ಕಾರ್ಯಗತಗೊಳಿಸಲು ಇನ್ನಷ್ಟು ಸವಾಲಾಗಿದೆ .

NEP 2020 ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಗತಿಪರ ಬದಲಾವಣೆಗಳನ್ನು ತಂದರೆ, ಇದು ಶಿಕ್ಷಕರಿಗೆ ನಿರ್ದಿಷ್ಟವಾಗಿ ವೃತ್ತಿಪರ ಅಭಿವೃದ್ಧಿ, ಡಿಜಿಟಲ್ ಸಾಕ್ಷರತೆ, ಪಠ್ಯಕ್ರಮದ ಅಳವಡಿಕೆ ಮತ್ತು ಹೆಚ್ಚಿದ ಜವಾಬ್ದಾರಿಗಳ ವಿಷಯದಲ್ಲಿ ಸವಾಲುಗಳ ಗುಂಪನ್ನು ಒದಗಿಸುತ್ತದೆ. ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ಬಲವಾದ ಬೆಂಬಲ ವ್ಯವಸ್ಥೆಗಳು , ಸಾಕಷ್ಟು ಸಂಪನ್ಮೂಲಗಳು ಮತ್ತು ಶಿಕ್ಷಕರನ್ನು ಸಬಲೀಕರಣಗೊಳಿಸಲು ಮತ್ತು NEP ಯ ಮಹತ್ವಾಕಾಂಕ್ಷೆಯ ಗುರಿಗಳನ್ನು ಸಾಧಿಸಲು ನಿರಂತರ ತರಬೇತಿ ಅಗತ್ಯವಿರುತ್ತದೆ. ಸುಧಾರಣೆಗಳು ಯಶಸ್ವಿಯಾಗಲು, ಈ ಸವಾಲುಗಳನ್ನು ಎದುರಿಸಲು ಮತ್ತು ಹೆಚ್ಚು ಅಂತರ್ಗತ ಮತ್ತು ಕ್ರಿಯಾತ್ಮಕ ಶೈಕ್ಷಣಿಕ ವಾತಾವರಣವನ್ನು ಬೆಳೆಸುವಲ್ಲಿ ಸರ್ಕಾರದ ಬೆಂಬಲ ಮತ್ತು ಸಮುದಾಯದ ಒಳಗೊಳ್ಳುವಿಕೆ ಎರಡೂ ನಿರ್ಣಾಯಕವಾಗಿರುತ್ತದೆ.

- **ಡಾ.ಕೌಶಿಕ್ ಎಂ.ಸಿ.,** ಸಹಾಯಕ ಪ್ರಾಧ್ಯಾಪಕರು
- ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.
98867 01926

## ವಿಜಯೇಂದ್ರ ನೇತೃತ್ವದಲ್ಲಿ ಮೂರೂ ಕ್ಷೇತ್ರಗಳಲ್ಲಿ ಗೆಲುವು : ಜಿ.ಎಸ್.ಶ್ಯಾಮ್

ಬಳ್ಳಾರಿ, ನ.10- ರಾಜ್ಯದಲ್ಲಿ ನಡೆಯುತ್ತಿರುವ ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ನೇತೃತ್ವದಲ್ಲಿ ಸಂಡೂರು ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಲಿದೆ ಎಂದು ಬಿಜೆಪಿ ಯುವ ಘಟಕದ ರಾಜ್ಯ ಉಪಾಧ್ಯಕ್ಷ ಜಿ. ಎಸ್. ಶ್ಯಾಮ್ ವಿಶ್ವಾಸ ವ್ಯಕ್ತಪಡಿಸಿದರು.

ದರೋಜಿ ಗ್ರಾಮದಲ್ಲಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ ನೇತೃತ್ವದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಭಾರೀ ಬೆಂಬಲ ವ್ಯಕ್ತವಾಗಿದ್ದು, ಈ ಬಾರೀ ಸಂಡೂರಲ್ಲಿ ಹೆಚ್ಚು ಮತಗಳ ಅಂತರದಿಂದ ಗೆಲ್ಲುತ್ತೇವೆ ಎಂದರು.

ಈ ವೇಳೆ ಮಾತನಾಡಿದ ಶಾಸಕ ಜನಾರ್ದನ ರೆಡ್ಡಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿ ಕುಂಠಿತಗೊಂಡಿದೆ. ಗ್ಯಾರಂಟಿ ಯೋಜನೆ ಅಡಿಯಲ್ಲಿ ಜನರಿಗೆ ಹಣ ನೀಡಲು ಆಗುತ್ತಿಲ್ಲ ಎಂದರು. 3-4 ತಿಂಗಳಿಗೊಮ್ಮೆ ಗೃಹ ಲಕ್ಷ್ಮಿ ಹಣ ಹಾಕುತ್ತಿದ್ದಾರೆ. ಶಕ್ತಿ ಯೋಜನೆಯಡಿಯಲ್ಲಿ ಹೋಗಲು ಎಷ್ಟೋ ಗ್ರಾಮಗಳಿಗೆ ಸರ್ಕಾರಿ ಬಸ್‌ಗಳು ಇಲ್ಲ ಎಂದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಶ್ರೀರಾಮುಲು, ಶಾಸಕ ಆರಗ ಜ್ಞಾನೇಂದ್ರ, ಯುವ ಮೋರ್ಚಾ ರಾಜ್ಯ ಅಧ್ಯಕ್ಷ ಹಾಗೂ ದೊಡ್ಡಬಳ್ಳಾಪುರ ಶಾಸಕ ಧೀರಜ್ ಮುನಿರಾಜು, ವಿಧಾನಪರಿಷತ್ ಶಾಸಕ ಕಿಶೋರ್ ಕುಮಾರ್, ರಾಜ್ಯ ಬಿಜೆಪಿ ಕಾರ್ಯದರ್ಶಿ ದಿವಾಕರ್, ಹೊಳಲ್ಕೆರೆ ಶಾಸಕ ಚಂದ್ರಪ್ಪ, ಭೋವಿ ಸಮಾಜದ ಮುಖಂಡ ಓದೋ ಗಂಗಪ್ಪ, ಬಳ್ಳಾರಿ ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು, ಪ್ರಧಾನ ಕಾರ್ಯದರ್ಶಿಗಳಾದ ಹುಲುಗಪ್ಪ, ಸುರೇಶ್, ಬಳ್ಳಾರಿ ಮಾಜಿ ಮೇಯರ್ ಚಂದ್ರಯ್ಯ, ಅಡವಿ ಸ್ವಾಮಿ ರಾಜ್ಯ ಓಬಿಸಿ ಮೋರ್ಚಾ ಕಾರ್ಯದರ್ಶಿ ವೆಂಕಟೇಶ್ ಮತ್ತು ಇತರರು ಉಪಸ್ಥಿತರಿದ್ದರು.



## ಪೋಕ್ಸೋ ಕಾನೂನು ಅರಿವು ಅಗತ್ಯ

### ಜಗಳೂರಿನಲ್ಲಿ ಜೆಎಂಎಫ್‌ಸಿ ಮತ್ತು ಸಿವಿಲ್ ನ್ಯಾಯಾಧೀಶರಾದ ಆರ್. ಚೇತನ್



ಜಗಳೂರು, ನ.10- ವಿದ್ಯಾರ್ಥಿನಿಯರು ಪೋಕ್ಸೋ ಪ್ರಕರಣಗಳ ಕುರಿತು ಜಾಗೃತರಾಗಲು ಕಾನೂನು ಅರಿವು ಅಗತ್ಯ ಎಂದು ಜೆಎಂಎಫ್‌ಸಿ ಮತ್ತು ಸಿವಿಲ್ ನ್ಯಾಯಾಧೀಶರಾದ ಆರ್. ಚೇತನ್ ಅಭಿಮತ ವ್ಯಕ್ತಪಡಿಸಿದರು.

ತಾಲ್ಲೂಕಿನ ಬಿಳಿಚೋಡು ಪಬ್ಲಿಕ್ ಶಾಲೆಯಲ್ಲಿ ಕಾನೂನು ಸೇವಾ ದಿನಾಚರಣೆ ಅಂಗವಾಗಿ ಕಾನೂನು ಸೇವಾ ಸಮಿತಿ ಹಾಗೂ ತಾಲ್ಲೂಕು ಪಂಚಾಯಿತಿ, ಸಿಡಿಪಿಓ ಇಲಾಖೆ, ತಾಲ್ಲೂಕು ಆಡಳಿತ, ಕರ್ನಾಟಕ ಪಬ್ಲಿಕ್ ಶಾಲೆ ಮತ್ತು ವಕೀಲರ ಸಂಘ ಇವರುಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿನಿಯರು ಅಪ್ರಾಪ್ತ ವಯಸ್ಸಿನಲ್ಲಿ ಆಕರ್ಷಣೆಗೊಳಗಾಗಿ ಬಾಲ್ಯದಲ್ಲಿಯೇ ಶಿಕ್ಷಣದಿಂದ ವಿಮುಖರಾಗದೆ, ಪೋಷಕರ ಹಾಗೂ ಶಿಕ್ಷಕರ ಮಾರ್ಗದರ್ಶನಗಳನ್ನು ಪಾಲಿಸುತ್ತಾ ಉತ್ತಮ ವಿದ್ಯಾಭ್ಯಾಸದತ್ತ ಗಮನಹರಿಸಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ತಾಲ್ಲೂಕಿನಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚುತ್ತಿದ್ದು, ಇಲಾಖೆಗಳ ಜಾಗೃತಿ ಕಾರ್ಯಕ್ರಮಗಳ ಜೊತೆಗೆ ಸಾರ್ವಜನಿಕರು, ಸಂಘ-ಸಂಸ್ಥೆಗಳು ಬಾಲ್ಯ ವಿವಾಹ ನಿಯಂತ್ರಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಅಪ್ರಾಪ್ತ ವಯಸ್ಸಿನಲ್ಲಿ ವಾಹನ ಚಾಲನೆ ಮಾಡಿದಲ್ಲಿ ಅಪಘಾತಗಳು ಸಂಭವಿಸಿದರೆ ಅವರ ಪೋಷಕರೇ ನೇರ ಹೊಣೆಯಾಗುತ್ತಾರೆ. ಆದ್ದರಿಂದ ಕಾನೂನು ನಿಯಮಗಳನ್ನು ಉಲ್ಲಂಘಿಸದೆ 18 ವರ್ಷಗಳ ನಂತರ ಸೂಕ್ತ ಪ್ರಾಧಿಕಾರದಿಂದ ಪರವಾನಿಗೆ ಪಡೆದು ವಾಹನ ಚಾಲನೆಯಲ್ಲಿ ತೊಡಗಬೇಕು ಎಂದರು.

ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ಬಸವರಾಜ್ ಮಾತನಾಡಿ, ಹೈಕೋರ್ಟ್ ನಿರ್ದೇಶನದ ಮೇರೆಗೆ ಕಾನೂನು ಸೇವಾ ಸಮಿತಿ ವತಿಯಿಂದ ಕಾನೂನು ಅರಿವಿನೊಂದಿಗೆ, ನೊಂದವರಿಗೆ ನೆರವು ನೀಡುವ ವ್ಯವಸ್ಥೆಯಿದ್ದು ಮಹಿಳೆಯರು, ಪ.ಜಾತಿ, ಪ.ಪಂಗಡದ ಸಮುದಾಯದವರು ಪ್ರಾಧಿಕಾರದಲ್ಲಿ ಅರ್ಜಿ ಸಲ್ಲಿಸಿದರೆ ಉಚಿತವಾಗಿ ವಕೀಲರನ್ನು ನೇಮಿಸಿ, ಅವರ ಪರವಾಗಿ ವಾದಮಂಡನೆಗೆ ಹಾಜರಾಗುವ ಕಾನೂನು ಸುವ್ಯವಸ್ಥೆಯಿದೆ. ತಾಲ್ಲೂಕಿನ ನಾಗರಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ವಕೀಲರಾದ ಪಂಪಣ್ಣ, ಟಿ.ಸಣ್ಣಓಬಯ್ಯ, ಸಿಡಿಪಿಓ ಬೀರೇಂದ್ರಕುಮಾರ್, ಮೇಲ್ವಿಚಾರಕಿ ಶಾಂತಮ್ಮ, ಪ್ರಭಾರಿ ಪ್ರಾಚಾರ್ಯ ಪ್ರಕಾಶ್ ಎಚ್., ಪ್ರೌಢಶಾಲೆ ವಿಭಾಗದ ಮುಖ್ಯ ಶಿಕ್ಷಕ ಬಸವರಾಜ್, ಶಿಕ್ಷಕರಾದ ನಟರಾಜ್, ಶಿವಮೂರ್ತಿ, ಹುಲುಗಪ್ಪ, ರತ್ನಮಾಲಾ, ಜ್ಯೋತಿ, ಮಂಜು, ರಂಗನಾಥ್, ಪಿಎಸ್‌ಐ ರಮೇಶ್ ಉಪಸ್ಥಿತರಿದ್ದರು.

## ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ

ದಾವಣಗೆರೆ, ನ.10- ಜಿಲ್ಲಾ, ನಗರ ಕೇಂದ್ರ ಗ್ರಂಥಾಲ ಯದ ಸಹಯೋಗದೊಂದಿಗೆ ಇದೇ ದಿನಾಂಕ 14 ರಿಂದ 20 ರವರೆಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಿಸು ತ್ತಿದ್ದು, ಇದರ ಅಂಗವಾಗಿ ದಿನಾಂಕ 12 ರಂದು ದಾವಣಗೆರೆ ನಗರ ವ್ಯಾಪ್ತಿಯಲ್ಲಿ ಮತ್ತು ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಪ್ರಾಂಶುಪಾಲರು ಪ್ರತಿ ಶಾಲಾ, ಕಾಲೇಜುಗಳಿಂದ ಇಬ್ಬರು ವಿದ್ಯಾರ್ಥಿಗಳನ್ನು ಇದೇ ದಿನಾಂಕ 11 ರೊಳಗಾಗಿ ಸಿಲ್ವರ್ ಜ್ಯೂಬಿಲಿ ಶಾಖಾ ಗ್ರಂಥಾಲಯ, ಬಡಾವಣೆ ಪೊಲೀಸ್ ಠಾಣೆ ಎದುರು. ಹೈಸ್ಕೂಲ್ ಮೈದಾನ ಹತ್ತಿರ, ಇಲ್ಲಿ ನೋಂದಾಯಿಸಕೊಳ್ಳಬಹುದು.

ದಿನಾಂಕ 12 ರಂದು ಬೆಳಿಗ್ಗೆ 10.30 ರಿಂದ 11.30 ರವರೆಗೆ ನಗರದ ಸಿಲ್ವರ್ ಜ್ಯೂಬಿಲಿ ಶಾಖಾ ಗ್ರಂಥಾಲಯ ದಲ್ಲಿ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, 2 ರಿಂದ 7ನೇ ತರಗತಿಯವರೆಗೆ, ವಿಷಯ: ನಮ್ಮ ಪರಿಸರದ ಬಗ್ಗೆ.

ದಿನಾಂಕ 12 ರಂದು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಪ್ರಬಂಧ ಸ್ಪರ್ಧೆ 8 ರಿಂದ 10 ನೇ ತರಗತಿಯವರೆಗೆ ವಿಷಯ ಕನ್ನಡ ಸಾಹಿತ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಸಾಹಿತಿಗಳ ಕುರಿತು.

ದಿನಾಂಕ 12 ರಂದು ಮಧ್ಯಾಹ್ನ 12 ರಿಂದ 1 ರವರೆಗೆ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ, ದಾವಣಗೆರೆ ಜಿಲ್ಲೆಯ ಪ್ರೇಕ್ಷಣೀಯ ಸ್ಥಳದ ವಿಷಯದ ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

## ರಾಣೇಬೆನ್ನೂರಿನಲ್ಲಿ ಇಂದಿನಿಂದ ಖೋ-ಖೋ ಪಂದ್ಯಾವಳಿ

ರಾಜರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಅಂತರ್ ಮಹಿಳಾ ಮಹಾವಿದ್ಯಾಲಯಗಳ ಏಕವಲಯ ಖೋ-ಖೋ ಹಾಗೂ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಇಂದು ನಡೆಯಲಿದೆ ಎಂದು ಕೆಎಲ್‌ಇ ಸ್ಥಳೀಯ ಅಧ್ಯಕ್ಷ ವಿ.ಪಿ. ಲಿಂಗನಗೌಡ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯ ಹಾಗೂ ಐಕ್ಯೂಎಸಿ ಏರ್ಪಡಿಸಿರುವ ಈ ಪಂದ್ಯಾವಳಿಯನ್ನು ಶಾಸಕ ಪ್ರಕಾಶ ಕೋಳಿವಾಡ ಉದ್ಘಾಟಿಸಲಿದ್ದು, ವಿ.ವಿ. ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲಾ, ಸ್ಥಳೀಯ ನಿರ್ದೇಶಕರಾದ ಬಸವರಾಜ ಪಟ್ಟಣಶೆಟ್ಟಿ, ವೀರಣ್ಣ ಅಂಗಡಿ, ಜಯಣ್ಣ ಜಂಬಗಿ ಭಾಗವಹಿಸುವರು.

ನಾಳೆ ಮಂಗಳವಾರ ಖೋ-ಖೋ, ಬಾಲ್ ಬ್ಯಾಡ್ಮಿಂಟನ್ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಪ್ರಾಚಾರ್ಯ ನಾರಾಯಣ ನಾಯಕ ವಿವರಿಸಿದರು. ದೈಹಿಕ ನಿರ್ದೇಶಕ ಸಿ.ಎಸ್. ಮಂಜಪ್ಪ ಜೊತೆಗಿದ್ದರು.

**ಸೈಟ್ ಮಾರಾಟಕ್ಕೆ**
1) ಕರ್ನಾಟಕ ಗೃಹ ಮಂಡಳಿ : 120 ರಸ್ತೆಗೆ ಉತ್ತರ (84 Lakh), 40x60 ಸೌತ್ (70 ಲಕ್ಷ), 30x40 ಸೌತ್ (35 Lakh). 2) ಶಿವಪಾರ್ವತಿ : 40x58.5 ಪಶ್ಚಿಮ (96 ಲಕ್ಷ ) ಕಿರಣ್ ಬೂಸ್ನೂರ್ (ಏಜೆಂಟ್) 98440-63409, 97315-63409 (ನೇರವಾಗಿ ಮಾಲೀಕರು, 1/2 ಪರ್ಸೆಂಟ್ ಕಮೀಷನ್)

**ಬಿಜಾಪುರದ ರೊಟ್ಟಿ ಸಿಗುತ್ತದೆ**
ಬಿಸಿ ಮತ್ತು ಖಡಕ್ ರೊಟ್ಟಿ ಹಾಗೂ ಎಲ್ಲಾ ಶುಭ ಸಮಾರಂಭಗಳಿಗೂ ಮಾಡಿಕೊಡಲಾಗುತ್ತದೆ. 97436 21785 98447 48815

**ಕೆಲಸಕ್ಕೆ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು Day & Night Shift ನಲ್ಲಿ ಅನುಭವವುಳ್ಳವರು ಮತ್ತು ಹೊಸದಾಗಿ ಸೇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ : 94807 77338, 94821 09492

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ 99863 61250 80739 48857

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕ್ಯಾಷಿಯರ್ ಹುದ್ದೆಗೆ ಪುರುಷ - ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ : 94813-63681 ಭೇಟಿ ಸಮಯ : ಬೆಳಿಗ್ಗೆ 11 ರಿಂದ ಸಂಜೆ 6

**ಶಿಕ್ಷಕಿಯರು ಬೇಕಾಗಿದ್ದಾರೆ**
PUC, NTC, BA, B.Sc, B.Ed, B.Com. ದಾವಣಗೆರೆ. 99800 32237 93411 19195

**ಬೇಕಾಗಿದ್ದಾರೆ**
ಮೆಡಿಕಲ್ ಫಾರ್ಮಾದಲ್ಲಿ SSLC or PUC ಆದ ಹುಡುಗ ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಾವಳಗಿ ಫಾರ್ಮಾಸ್ಯೂಟಿಕಲ್ಸ್ ಹದಡಿ ರೋಡ್, ದಾವಣಗೆರೆ. 94484 24185

**ಕೆಲಸಕ್ಕೆ ಬೇಕಾಗಿದ್ದಾರೆ**
Nisha Family Bar & Restuarant, Jayanagara `A' Block, Davanagere. Chef, Heleper, Supplier, Learners. 88844 15640, 82176 61668

**WANTED**
Teachers for Pre-School and Abacus classes at Vidyanagar, Davangere. 91418 33555

**ಬೇಕಾಗಿದ್ದಾರೆ**
ಎಸ್.ಎಸ್.ಎಲ್.ಸಿ. ಪಾಸ್ / ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್ ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ. 94482 33326, 78991 35660

**ಸೈಟ್ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್ 2ನೇ ಹಂತ, ಶಿವಗಂಗಾ ಚೌಟ್ರಿ ಹಿಂಭಾಗ, ಉತ್ತರ ದಿಕ್ಕಿನ 38x45 ಅಡಿ ಅಳತೆಯ ಫೈನಲ್ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ. ಏಜೆಂಟ್ 99646 13795

**ಕೆಲಸಕ್ಕೆ ಬೇಕಾಗಿದ್ದಾರೆ**
ಸಮ್ಯಕ್ ಸೆರಾಮಿಕ್ಸ್ & ಗ್ರ್ಯಾನೈಟ್ಸ್ ನಗರದ ಪ್ರತಿಷ್ಠಿತ ಟೈಲ್ಸ್ ಶೋರೂಮ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿರುತ್ತಾರೆ. ಜಾಬ್ ವಿವರ : ಸೇಲ್ಸ್ (Sales) ರಿಸೆಪ್ಷನಿಸ್ಟ್ (Receptionist) ಮಾರ್ಕೆಟಿಂಗ್ (Marketing) ಸಂಪರ್ಕಿಸುವ ಮೊ.ನಂ. 80501 80487

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್ #856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88 98444 20009, 90711 19996

**ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಅಡುಗೆ ಮಾಡಲು ಅನುಭವವುಳ್ಳ ಅಡುಗೆ ಭಟ್ಟರು ಬೇಕಾಗಿದ್ದಾರೆ (ಪುರುಷರು) ಸಂಪರ್ಕಿಸಿ: 90085 57203

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ, ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು. 88676 77031

**ಹೋಟೆಲ್ ಮಾರಾಟಕ್ಕಿದೆ**
ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ದಾವಣಗೆರೆ - 4. 84948 20288

**ಶಿವ ಸೈಬರ್ ಕಫೆ**
ಕನ್ನಡ & ಇಂಗಿಷ್ ಟೈಪಿಸ್ಟ್ ಬೇಕಾಗಿದ್ದಾರೆ. ಮೊ. 98808 23450

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಾಲೇಜ್ ಒಂದರಲ್ಲಿ ಅಡುಗೆ ಭಟ್ಟರು ಮತ್ತು ಸಹಾಯಕರು ಬೇಕಾಗಿದ್ದಾರೆ. ಮೊ. : 9980647014

**ಜಮೀನು ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ದುಗ್ಗಾವತಿ ಗ್ರಾಮಕ್ಕೆ ಸೇರಿದ ಹೈದ್ರಾಬಾದ್ ಟು ಮಂಗಳೂರು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ವಾಣಿಜ್ಯ ಉಪಯೋಗಕ್ಕೆ ಅನುಕೂಲವಾದ 2 ಎಕರೆ 90 ಸೆಂಟ್ಸ್ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ : 99024 90165

**ಸ್ಪೋಕನ್ ಇಂಗ್ಲೀಷ್ & ಕಂಪ್ಯೂಟರ್ ಅಕಾಡೆಮಿ**
33 ದಿನಗಳಲ್ಲಿ ಕಲಿಯಿರಿ ವಿಕಾಸ್ ಅಕಾಡೆಮಿ ರಾಂ & ಕೋ ಸರ್ಕಲ್, ದಾವಣಗೆರೆ. 93802 29199 97399 22225

**ಬೇಕಾಗಿದ್ದಾರೆ**
VC ಫೈಬರ್ ನೆಟ್‌ನಲ್ಲಿ ಮಾರ್ಕೆಟಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ. Fresher / Experience ಸ್ಥಳ : ದಾವಣಗೆರೆ. ಸಂಪರ್ಕಿಸಿ : 97388 30061 84050 50573

**NEED COMPUTER OPERATOR**
FOR CYBER SHOP Near Ram & Co Circle, DVG 70221 58935

ಮನೆಗೊಂದು ಮರ ಊರಿಗೊಂದು ವನ

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ ಶ್ರೀ ಗುರು ಎಂಟರ್ ಪ್ರೈಸಸ್ #579, 6ನೇ ಮುಖ್ಯ ರಸ್ತೆ, PJ ಬಡಾವಣೆ ದಾವಣಗೆರೆ.

**TO LET**
2 BHK House for Lease Doggalli Compound, Near LIC Office, K.R. Road, Davangere. 94483 76399

**ಮಳಿಗೆ ಬಾಡಿಗೆಗಿದೆ**
KSRTC ಹೊಸ ಬಸ್ ನಿಲ್ದಾಣದ ಪಕ್ಕ 4ಸೀಜನ್ ಹೋಟೆಲ್‌ನ ಎದುರಿಗೆ 2ನೇ ಮಹಡಿಯಲ್ಲಿ 18x50 ಅಳತೆ ಇರುವ ಕಛೇರಿಗೆ ಸೂಕ್ತವಾದ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ: 99644 93693, 89705 26905

**ROBOTIC CLASSES**
Age group : 8 years & above Bruit Academy M : 97390 66956

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ) ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ. 73533 29440, 81972 20933

**ಬಾಡಿಗೆಗೆ ಇದೆ**
ಶಿವ-ಪಾರ್ವತಿ ದೇವಸ್ಥಾನದ ಎದುರು 1400 ಚ.ಅ. ಆಫೀಸ್ ಜೊತೆಗೆ ಇಂಟೀರಿಯರ್ಸ್ ಸಮೇತ ಬಾಡಿಗೆಗೆ ಇದೆ. ವಿದ್ಯಾನಗರ ಮುಖ್ಯರಸ್ತೆ, 1ನೇ ಮಹಡಿ. 72047 48919, 98444 43242

**ಮಾಯಕೊಂಡ ಡಿ.ಟಿ.ಪಿ. ಮತ್ತು ಜೆರಾಕ್ಸ್ ಸೆಂಟರ್**
● G-ಸೇವಾಕೇಂದ್ರ ● ಆನ್‌ಲೈನ್ ಸರ್ವೀಸ್ ● ಇ-ಸ್ಟ್ಯಾಂಪ್ ಪೇಪರ್ ● ಕನ್ನಡ, ● ಇಂಗ್ಲಿಷ್ ಟೈಪಿಂಗ್ ● ಪ್ರಮಾಣ ಪತ್ರ ● ಅಗ್ರಿಮೆಂಟ್ಸ್ ● ವಾಟ್ಸ್‌ಅಫ್ ಪ್ರಿಂಟ್ ಔಟ್ ● ಲ್ಯಾಮಿನಿಷನ್ ● ಲಗ್ನ ಪತ್ರಿಕೆ ● ಲೇಟರ್ಸ್ ಪ್ಯಾಡ್ ● ಕಲರ್ ಜೆರಾಕ್ಸ್ ಮಾಡಿಕೊಡಲಾಗುತ್ತದೆ. #181/1 ತೋ 3EF, ರವಿ ನರ್ಸಿಂಗ್ ಹೋಮ್, ಡಾ|| ಕೆಂಚಪ್ಪ ಆಸ್ಪತ್ರೆ ಪಕ್ಕ ನರಸರಾಜ ರೋಡ್, ದಾವಣಗೆರೆ-577001. ಮೊ. : 98444 38007

**VJ MAKEUP STUDIO & ACADEMY**
SS Layout, Near Bapuji MBA College, Davanagere. 35 ದಿನಗಳಲ್ಲಿ ಮೇಕಪ್ ತರಬೇತಿ ನೀಡಲಾಗುವುದು. 35 Days Intensive Bridal Training Basic To Advanced Makeup Course. Contact : 96865 91896 Insta@makeoverby_Vijayajagadeesh Classes starts in December

**TUITIONS**
ಗುರುದತ್ತ ಬಿ. ನಾಡಿಗೇರ್ PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials 97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್ Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing 97398 65711, 94822 44114

**RAJASTHAN TOUR**
Dep: 29th NOV, Duration: 10 Days Premium PKG Rs 59,600 pp DVG WORLD TOURS P J Exten, Davanagere. 99006 66122

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ. ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ (ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ. 9740064163

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು. Qualification: Anything is OK ಸ್ಥಳ: 1) K.R. Market, Davanagere 2) Charlie Pailwan Road, Davangere. Contact: 99167 36057, 95350 51589

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere. 98444 92888




## ಚದುರಂಗ ಮಕ್ಕಳ ಬುದ್ಧಿ ಶಕ್ತಿ ಬೆಳವಣಿಗೆಗೆ ಸಹಕಾರಿ

**ಓಪನ್ ರ್‍ಯಾಪಿಡ್ ಚೆಸ್ ಪಂದ್ಯಾವಳಿಯ ಉದ್ಘಾಟನೆಯಲ್ಲಿ ದಿನೇಶ್ ಕೆ.ಶೆಟ್ಟಿ**

ದಾವಣಗೆರೆ, ನ. 10- ನಗರದ ಗುರುಭವನದಲ್ಲಿ ದಾವಣಗೆರೆ ಚೆಸ್ ಕ್ಲಬ್ ಹಾಗೂ ಸರ್ಕಲ್ ಚೆಸ್ ಅವರ ಸಹಯೋಗದೊಂದಿಗೆ ಓಪನ್ ರ್‍ಯಾಪಿಡ್ ಚೆಸ್ ಪಂದ್ಯಾವಳಿ ಏರ್ಪಡಿಸಲಾಗಿತ್ತು.

ಪಂದ್ಯಾವಳಿಯನ್ನು ಉದ್ಘಾಟಿಸಿದ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ, ದಾವಣಗೆರೆ ಚೆಸ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಮಾತನಾಡಿ, ಮಕ್ಕಳ ನೆನಪಿನ ಶಕ್ತಿ ಬೆಳವಣಿಗೆಗೆ ಚದುರಂಗವು ಉತ್ತಮ ರೀತಿಯಲ್ಲಿ ಸಹಕಾರಿಯಾಗುತ್ತದೆ.

ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳಲು ತಾಳ್ಮೆ ಅವಶ್ಯ ವಾಗಿರುತ್ತದೆ. ಇಂತಹ ಆಟದಿಂದ ತಾಳ್ಮೆ ವೃದ್ಧಿಯಾಗಿ ಮಕ್ಕಳು ಉತ್ತಮ ಪ್ರಜೆಗಳಾಗುತ್ತಾರೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಮಾತನಾಡಿ, ಚದುರಂಗವು ಎಲ್ಲಾ ಕ್ರೀಡೆಗಳಿಗಿಂತ ಭಿನ್ನವಾಗಿದೆ. ಇದರಲ್ಲಿ ತಾಳ್ಮೆ ಇದ್ದವರು ಉತ್ತಮ ಪ್ರದರ್ಶನ ನೀಡಿ ಜಯಶಾಲಿಯಾಗುತ್ತಾರೆ. ಸಣ್ಣ ಮಕ್ಕಳಿಂದ ಈ ಆಟವನ್ನು ರೂಢಿಸಿಕೊಂಡರೆ ಅವರ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಯುವರಾಜ್, ಮಂಜುಳಾ, ಯುವರಾಜ್, ಸುರೇಶ್, ತೀರ್ಪುಗಾರರಾದ ಆದಿತ್ಯ, ಕೃಷ್ಣಮೂರ್ತಿ ಮುಂತಾದವರಿದ್ದರು.

# ಸೌಲಭ್ಯ ಪಡೆಯಲು ಕಾನೂನು ತಿಳುವಳಿಕೆ ಅಗತ್ಯ

## ರಾ.ಲ. ಕಾನೂನು ಕಾಲೇಜಿನಲ್ಲಿನ 'ಕಾನೂನು ನೆರವು-ಅರಿವು' ಕಾರ್ಯಕ್ರಮದಲ್ಲಿ ರಾಜೇಶ್ವರಿ ಹೆಗಡೆ

ದಾವಣಗೆರೆ, ನ. 10- ಸೌಲಭ್ಯಗಳನ್ನು ಪಡೆಯಲು ಪ್ರತಿಯೊಬ್ಬರಿಗೂ ಕಾನೂನು ತಿಳುವಳಿಕೆ ಅಗತ್ಯ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಹೆಗಡೆ ಹೇಳಿದರು.

ನಗರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆರ್.ಎಲ್ ಕಾನೂನು ಮಹಾವಿದ್ಯಾಲಯ, ಜಿಲ್ಲಾ ವಕೀಲರ ಸಂಘ ಸಹಯೋಗದಲ್ಲಿ ಆರ್.ಎಲ್. ಕಾನೂನು ಕಾಲೇಜಿನಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯ ಅಂಗವಾಗಿ ನಿನ್ನೆ ಹಮ್ಮಿಕೊಂಡಿದ್ದ 'ಕಾನೂನು ನೆರವು-ಅರಿವು' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಪ್ರತಿಯೊಬ್ಬ ನಾಗರಿಕರಿಗೂ ನ್ಯಾಯ ಸಿಗಬೇಕು ಎಂಬ ಉದ್ದೇಶದಿಂದ 1987ರಲ್ಲಿ ಕಾನೂನು ಕಾಯ್ದೆಯನ್ನು ಜಾರಿಗೆ ತರಲಾಯಿತು. ನಂತರ ಹಂತ ಹಂತವಾಗಿ ಬದಲಾವಣೆಯಾಗಿ 1995ರಲ್ಲಿ ಕಾನೂನು ಸೇವಾ ಪ್ರಾಧಿಕಾರ ಅಸ್ತಿತ್ವಕ್ಕೆ ಬಂತು. ಇದರ ನೆನಪಿಗಾಗಿ ಕಾನೂನು ಸೇವಾ ಪ್ರಾಧಿಕಾರ ದಿನಾಚರಣೆ ಹಮ್ಮಿಕೊಳ್ಳಲಾಗುತ್ತಿದ್ದು, ವಿದ್ಯಾರ್ಥಿಗಳು ಕಾನೂನು ಸೇವಾ ಪ್ರಾಧಿಕಾರದ ಬಗ್ಗೆ ತಿಳಿಯಬೇಕು ಎಂದು ಹೇಳಿದರು.

ರಾಜ್ಯ ಮಟ್ಟದಿಂದ ಹಿಡಿದು ತಾಲ್ಲೂಕು ಮಟ್ಟದವರೆಗೂ ಕಾನೂನು ಸೇವಾ ಪ್ರಾಧಿಕಾರ ತನ್ನ ಸೇವೆಯನ್ನು ನಿರ್ವಹಿಸುತ್ತಿದ್ದು, ಪ್ರತಿಯೊಬ್ಬರು ಉಪಯೋಗ ಪಡೆದುಕೊಳ್ಳಬೇಕು. ಮಹಿಳೆಯರು, ಮಕ್ಕಳಿಗೆ, ಶೋಷಿತರಿಗೆ ಪ್ರಾಧಿಕಾರದಲ್ಲಿ ಉಚಿತ ಕಾನೂನಿನ ನೆರವು ಸಿಗಲಿದ್ದು, ಪ್ರಾಧಿಕಾರದಿಂದ ಲೋಕ್



ಅದಾಲತ್ ಆಯೋಜಿಸಿದಾಗ ರಾಜೀ ಸಂಧಾನದ ಮೂಲಕ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಬಹುದು ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್ ಅರುಣ್ ಕುಮಾರ್ ಮಾತನಾಡಿ, ಕಾನೂನು ಇಲ್ಲದೆ ದೇಶವನ್ನು ಶಾಂತಿ, ಸೌಹಾರ್ದವಾಗಿ ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ಕಾನೂನು ವಿದ್ಯಾರ್ಥಿಗಳ ಮೇಲೆ ಸಮಾಜ ಕಟ್ಟುವ ಬಹುದೊಡ್ಡ ಜವಾಬ್ದಾರಿಯಿದೆ ಎಂದರು.

ದೇಶದಲ್ಲಿರುವ ಬಡತನ, ಹಸಿವು, ದೌರ್ಜನ್ಯ ನಿವಾರಣೆ ಮಾಡುವ ಮನೋಭಾವವನ್ನು ಕಾನೂನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಬಡವರ, ರೈತರ, ಶೋಷಿತರ ಬಗ್ಗೆ ಯೋಚಿಸುವುದರ ಜೊತೆಗೆ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಎಸ್.ಯತೀಶ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ನಿವೇದಿತಾ ಟಿ.ಎಂ., ಸಹ ಪ್ರಾಧ್ಯಾಪಕರಾದ ಬಸವನಗೌಡ ಪಾಟೀಲ್, ಪ್ರದೀಪ್‌ಕುಮಾರ್, ಪಂಕಜಾ, ವಿದ್ಯಾಧರ ವೇದವರ್ಮ, ಪವನ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಇದ್ದರು.

## ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಇಂದು ಆರೋಗ್ಯ ತಪಾಸಣಾ ಶಿಬಿರ

ಜಿಲ್ಲಾ ವಕೀಲರ ಸಂಘ, ಜಿಲ್ಲಾ ನ್ಯಾಯಾಂಗ ಇಲಾಖೆ ಇವರ ಸಹಯೋಗದಲ್ಲಿ ಎನ್.ಹೆಚ್. ನಿಧಿ ಹೆಲ್ತ್‌ಕೇರ್ (ಬೆಂಗಳೂರು) ಇವರ ವತಿಯಿಂದ ಇಂದು ಬೆಳಿಗ್ಗೆ 10.30ಕ್ಕೆ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ನೆರವೇರಿಸಲಿದ್ದು, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಂಜಪ್ಪ, ಹನುಮಂತಪ್ಪ, ಅಣ್ಣಯ್ಯನವರ, ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್‌ಕುಮಾರ್, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಎಸ್‌ಟಿಎಫ್‌ಸಿ1ರ ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ, ಕೌಟುಂಬಿಕ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಶಿವಪ್ಪ-ಗಂಗಪ್ಪ ಸಲಗರೆ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಟಿ.ಎಂ. ನಿವೇದಿತಾ ಆಗಮಿಸಲಿದ್ದಾರೆ.

## ಸ್ವಚ್ಛತೆ, ಘನತ್ಯಾಜ್ಯ ನಿರ್ವಹಣೆಗೆ ಸಾರ್ವಜನಿಕರಿಂದ ಸಲಹೆಗಳ ಆಹ್ವಾನ

ದಾವಣಗೆರೆ, ನ. 10- ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಯೋಜನೆಯ ಪ್ರಮುಖ ಗುರಿಗಳಾದ ಮನೆ ತ್ಯಾಜ್ಯ ಸಂಗ್ರಹಣೆ, ವಿಂಗಡಣೆ ಹಾಗೂ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಪ್ಲಾಸ್ಟಿಕ್ ನಿಷೇಧ, ನಗರ ಸೌಂದರ್ಯ ಹಾಗೂ ವೈಜ್ಞಾನಿಕ ವಿಲೇವಾರಿಯಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ಮಹಾನಗರ ಪಾಲಿಕೆಯು ಪ್ರಗತಿ ಸಾಧಿಸಿರುತ್ತದೆ. ಇದರ ಪ್ರಮಾಣೀಕರಣಕ್ಕೆ ಅವಶ್ಯವಿರುವ ಎಲ್ಲಾ ಮಾನದಂಡಗಳನ್ನು ಅನುಸರಿಸಿರುತ್ತದೆ. ಆದ್ದರಿಂದ ನಗರವನ್ನು ಕಸ ಮುಕ್ತ ನಗರ ಸ್ಟಾರ್ ರೇಟಿಂಗ್ 3 ಎಂದು ಘೋಷಿಸಲಾಗುವುದು. ಇದಕ್ಕೆ ಸಾರ್ವಜನಿಕರ ಹಾಗೂ ಸಂಘ ಸಂಸ್ಥೆ ಗಳಿಂದ ಸಲಹೆ, ಆಕ್ಷೇಪಣೆಗಳು ಇದ್ದಲ್ಲಿ ಮಹಾನಗರ ಪಾಲಿಕೆ ಆರೋಗ್ಯ ಶಾಖೆ ಕಚೇರಿಗೆ ಲಿಖಿತ ರೂಪದಲ್ಲಿ ಇದೇ ದಿನಾಂಕ 15 ರೊಳಗಾಗಿ ಸಲ್ಲಿಸುವಂತೆ ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

# ದಾವಣಗೆರೆ ಕೈಗಾರಿಕೆ, ಐಟಿ ಬಿಟಿ ಹಬ್ ಆಗದಿರುವುದು ದುರದೃಷ್ಟಕರ

ದಾವಣಗೆರೆ, ನ. 10 - ಮಧ್ಯ ಕರ್ನಾಟಕದ ಕೇಂದ್ರ ಬಿಂದು ದಾವಣಗೆರೆಯು ನಿಜವಾಗಿಯೂ ಇಂಡಸ್ಟ್ರಿಯಲ್, ಐಟಿಬಿಟಿ ಹಬ್ ಇಷ್ಟರೊಳಗೆ ಆಗಬೇಕಿತ್ತು. ಮ್ಯಾಂಚೆಸ್ಟರ್ ಆಫ್ ಕರ್ನಾಟಕ ಖ್ಯಾತಿ ಹೊಂದಿದ್ದ ಇಲ್ಲಿ ಯಾವುದೇ ದೊಡ್ಡ ಕೈಗಾರಿಕೆಗಳಿಲ್ಲ, ಐಟಿಬಿಟಿ ಇಲ್ಲದಿರುವುದು ದುರದೃಷ್ಟಕರ. ವಿಶ್ವದರ್ಜೆಯ ಶಾಲೆಗಳು, ಕಾಲೇಜುಗಳು, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು ಬರಲು ಬಿಡುತ್ತಿಲ್ಲ. ಹಾಗಾಗಿ, ಬೆಳೆಯಲು ಅವಕಾಶ ಇಲ್ಲದಂತಾಗಿದೆ ಎಂದು ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ. ಬಿ. ವಿನಯ್ ಕುಮಾರ್ ಅವರು ವಿಷಾದ ವ್ಯಕ್ತಪಡಿಸಿದರು.



**ನನ್ನ ಬೆಸ್ಟ್ ಫ್ರೆಂಡ್ಸ್ ಬುಕ್ಸ್**

ನನಗೆ ಪುಸ್ತಕ ಓದುವ ಹವ್ಯಾಸ ಮೊದಲಿನಿಂದಲೂ ಇತ್ತು. ನಾನು ಬೆಳೆದಿದ್ದು ಬಡತನದಲ್ಲಿ. ನಮ್ಮದು ಸಾಮಾನ್ಯ ಕುಟುಂಬ. ಪುಸ್ತಕ ಖರೀದಿಸಲು ತೊಂದರೆ ಇಲ್ಲ. ಪುಸ್ತಕಗಳು ನನ್ನ ಒಳ್ಳೆಯ ಗೆಳೆಯ. ಬೆಳಿಗ್ಗೆ ಮತ್ತು ರಾತ್ರಿ ವೇಳೆಯಲ್ಲಿ ಪುಸ್ತಕ ಹೆಚ್ಚಾಗಿ ಓದಿದ್ದರಿಂದ ನನಗೆ ಆತ್ಮವಿಶ್ವಾಸ, ಜ್ಞಾನ, ಪರಿಪಕ್ವತೆಗೆ ಅನುಕೂಲವಾಯಿತು. ಇಷ್ಟೊಂದು ಸಾಧನೆ ಮಾಡಲು ಪ್ರೇರಣೆ ನೀಡಿದ್ದೇ ಬುಕ್ಸ್‌ಗಳು.

ನಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಳ್ಳಲು ಹೆಚ್ಚಾಗಿ ಪುಸ್ತಕ ಓದಲೇಬೇಕು. ಕೇವಲ ಓದಿನಲ್ಲೇ ಮುಳುಗದೇ ಪಠ್ಯೇತರ ಚಟುವಟಿಕೆಗಳಲ್ಲಿಯೂ ಹೆಚ್ಚಾಗಿ ತೊಡಗಿಸಿಕೊಂಡರೆ ಅಕಾಡೆಮಿಕ್ ವಿಚಾರದಲ್ಲಿ ಯಶಸ್ಸು ಗಳಿಸಬಹುದು. ನಮ್ಮಲ್ಲಿ ಯಾವುದೇ ಕಾರಣಕ್ಕೂ ಅನಿಶ್ಚಿತತೆ ಇರಬಾರದು.

-**ಜಿ.ಬಿ. ವಿನಯ್ ಕುಮಾರ್**, ಸಂಸ್ಥಾಪಕ ನಿರ್ದೇಶಕರು, ಇನ್‌ಸೈಟ್ಸ್ ಸಂಸ್ಥೆ

ನಗರದ ಯುಬಿಡಿಟಿ ಕಾಲೇಜಿನಲ್ಲಿ ಏರ್ಪಡಿ ಸಿದ್ದ 'ಎಲೆಕ್ಟ್ರಾನಿಕ್ ಅಂಡ್ ಇನ್‌ಸ್ಟ್ರುಮೆಂಟೇಶನ್' ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ವಿಶೇಷ ಉಪನ್ಯಾಸಕರಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಹಿಂದೆ ಕಾಟನ್ ಮಿಲ್‌ಗಳು, ಹತ್ತಿ ಮಿಲ್ ಗಳು, ರೈಸ್ ಮಿಲ್‌ಗಳು ಹೆಚ್ಚಾಗಿದ್ದವು. ಆದರೆ, ಇಂದು ಕಡಿಮೆಯಾಗಿವೆ. ಈಗ ಕೆಲ ಸಕ್ಕರೆ ಕಾರ್ಖಾನೆಗಳು, ಹೈಸ್ಕೂಲ್‌ಗಳು, ಸರ್ಕಾರಿ ಶಾಲೆಗಳು, ಖಾಸಗಿ ಶಾಲೆ ಮತ್ತು ಕಾಲೇಜುಗಳು, ಆಸ್ಪತ್ರೆಗಳು ಹೆಚ್ಚಾಗಿವೆ. ಎಲೆಕ್ಟ್ರಾನಿಕ್ ವಿಭಾಗದ ಯಾವ ಕೈಗಾರಿಕೆಗಳೂ ಇಲ್ಲ. ಐಟಿಬಿಟಿ ಬೆಳೆದೇ ಇಲ್ಲ. ಇದು ಆಗದಿರುವುದಕ್ಕೆ ಕಾರಣವೇನು ಎಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕಾದ ತುರ್ತು ಅಗತ್ಯತೆ ಇದೆ ಎಂದು ಪ್ರತಿಪಾದಿಸಿದರು.

ವಿಶ್ವದಲ್ಲಿನ ಉತ್ಕೃಷ್ಟ ಗುಣಮಟ್ಟದ ವಿಶ್ವವಿದ್ಯಾನಿಲಯಗಳಲ್ಲಿ ಓದಲು ಪ್ರಯತ್ನ ಪಡಿ. ಒಂದು ವೇಳೆ ಆಗದಿದ್ದರೆ ಇಲ್ಲಿಯೇ ಸಿಗುವ ಆಯ್ದ ಶಿಕ್ಷಣ ಸಂಸ್ಥೆಗಳಲ್ಲಿ ಸೇರಿಕೊಂಡು ಕಷ್ಟಪಟ್ಟು ಓದಿ. ತಂತ್ರಜ್ಞಾನದಲ್ಲಿ ಆಗುತ್ತಿರುವ ಬದಲಾವಣೆ, ಬರುತ್ತಿರುವ ಹೊಸ ಹೊಸ ಟೆಕ್ನಾಲಜಿ ಬಗ್ಗೆ ಜ್ಞಾನ ಪಡೆದುಕೊಳ್ಳಿ. ಆಗದು ಎಂದು ಕುಳಿತರೆ ಏನೂ ಆಗುವುದಿಲ್ಲ. ನಮ್ಮ ಕೈಯಲ್ಲಿ ಸಾಧ್ಯವೆಂದುಕೊಂಡು ಮುನ್ನಡೆದರೆ ಖಂಡಿತವಾಗಿಯೂ ಆಗಿಯೇ ಆಗುತ್ತದೆ. ಮನಸ್ಸಿದ್ದರೆ ಮಾರ್ಗ ಎಂಬ ಮಾತಿನಂತೆ ಮುನ್ನುಗ್ಗಿ ಎಂದು ಕರೆ ನೀಡಿದರು.

ಹೊಸ ಹೊಸ ಸಂಶೋಧನೆ ಜೊತೆಗೆ ಪಠ್ಯೇತರ ಚಟುವಟಿಕೆಗಳು, ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಂಡರೆ ಅವಕಾಶ ಗಳು ನಿಮ್ಮನ್ನೇ ಹುಡುಕಿಕೊಂಡು ಬರುತ್ತವೆ ಎಂದು ವಿನಯ್ ಕುಮಾರ್ ಕಿವಿಮಾತು ಹೇಳಿದರು. ಎಂಜಿನಿಯರಿಂಗ್ ಓದಿದ ಮೇಲೆ ಕೆಲಸ ಸಿಗುತ್ತೋ ಇಲ್ಲವೋ, ಅಂಕ ಎಷ್ಟು ಬರುತ್ತದೆಯೋ ಏನೋ, ಕ್ಯಾಂಪಸ್ ನಲ್ಲಿ ಉದ್ಯೋಗ ಸಿಗುತ್ತದೆಯೋ ಇಲ್ಲವೋ ಎಂಬ ಗೊಂದಲದಲ್ಲಿಯೇ ಇರಬೇಕಾಗುತ್ತದೆ. ಯಾವ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ಇರುತ್ತದೆಯೋ ಆ ಕ್ಷೇತ್ರದಲ್ಲಿ ಹೆಚ್ಚು ಅವಕಾಶಗಳನ್ನು ಗಿಟ್ಟಿಸಿಕೊಳ್ಳಬಹುದು. ಕೌಶಲ್ಯ, ಸತತ ಪರಿಶ್ರಮ, ತಿಳಿದುಕೊಳ್ಳುವ ಆಸಕ್ತಿ, ಹುಡುಕುವ ತುಡಿತ, ಉತ್ತಮ ವ್ಯಕ್ತಿತ್ವ ಸೇರಿದಂತೆ ಅತ್ಯುತ್ತಮ ಗುಣಗಳನ್ನು ಬೆಳೆಸಿಕೊಂಡರೆ ಜೀವನದಲ್ಲಿ ಉನ್ನತ ಹುದ್ದೆಗೇರಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಯುಬಿಡಿಟಿ ಕಾಲೇಜಿನ ಪ್ರಾಚಾರ್ಯರಾದ ಡಾ. ಡಿ.ಪಿ. ನಾಗರಾಜಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹರೀಶ್‌ಗೆ ಹಂಪಿಯಲ್ಲಿ ಇಂದು ಸನ್ಮಾನ



ದಾವಣಗೆರೆ, ನ.10- ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಹೆಚ್‌ಡಿ ಪದವಿ ಪಡೆದ ಸಂಶೋಧಕರಾದ ನಿಟುವಳ್ಳಿಯ ಡಾ.ಕೆ. ಹರೀಶ್ ಅವರಿಗೆ ನಾಳೆ ದಿನಾಂಕ 11 ರಂದು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸನ್ಮಾನ ನಡೆಯಲಿದೆ.

ಕರ್ನಾಟಕ ಇತಿಹಾಸ ಅಕಾಡೆಮಿಯ 38ನೇ ರಾಷ್ಟ್ರೀಯ ಸಮ್ಮೇಳನ ಹಾಗೂ ಪಿ.ಎಚ್.ಡಿ ಮತ್ತು ಡಿ. ಲಿಟ್ ಪದವೀಧರರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದ್ದು, ಈ ವೇಳೆ ಡಾ. ಕೆ. ಹರೀಶ್ ಅವರಿಗೆ ಸನ್ಮಾನ ನಡೆಯಲಿದೆ. ಹರೀಶ್, ಎಲೆಬೇತೂರು ಗ್ರಾಮದ ಶ್ರೀಮತಿ ಬಸಮ್ಮ ಹಾಗೂ ಕೊಟ್ರಬಸಪ್ಪ ಛಲವಾದಿ ದಂಪತಿ ಪುತ್ರ.

## ಜಿಎಂಐಟಿಯಲ್ಲಿ ಇಂದು ಕಾರ್ಯಾಗಾರ

ದಾವಣಗೆರೆ, ನ. 10- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಇನ್‌ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಿಂದ ಅಟಲ್ ಪ್ರಾಯೋಜಿತ ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಮ್ ನಾಳೆ ದಿನಾಂಕ 11 ರಿಂದ 16 ರವರೆಗೆ ನಡೆಯಲಿದೆ ಎಂದು ಜಿ.ಎಂ. ವಿವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರೂ, ಎಫ್‌ಡಿಪಿ ಸಂಚಾಲಕ ಡಾ. ವೀರಗಂಗಾಧರ ಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಮ್ ಶೀರ್ಷಿಕೆಯು 'ಬಿಲ್ಡಿಂಗ್ ಎ ಕಲ್ಚರ್ ಆಫ್ ಸೈಬರ್ ಸೆಕ್ಯೂರಿಟಿ - ಟ್ರೈನ್ ಯುವರ್ ಎಂಪ್ಲಾಯೀಸ್ ಟು ಬಿ ಸೇಫ್ ಆನ್ ಲೈನ್' ಎಂಬುದಾಗಿ ಇದೆ ಎಂದರು. ನಾಳೆ ಸೋಮವಾರ ಬೆಳಿಗ್ಗೆ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಮುಖ್ಯ ಅತಿಥಿಗಳಾಗಿ ಚಿಕ್ಕಬಳ್ಳಾಪುರ ಎಸ್‌ಜೆಸಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಟಿ. ರಾಜು ಆಗಮಿಸಲಿದ್ದಾರೆ ಎಂದು ಎಫ್‌ಡಿಪಿ ಸಂಯೋಜಕರಾದ ಪ್ರೊ. ಸೌಮ್ಯ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟಿಮನಿ ಉಪಸ್ಥಿತರಿದ್ದರು.

## ಬಾಡದಲ್ಲಿ ಇಂದು ನೂತನ ವಾಣಿಜ್ಯ ಸಂಕೀರ್ಣ ಕಟ್ಟಡದ ಉದ್ಘಾಟನೆ

ಬಾಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ವಾಣಿಜ್ಯ ಸಂಕೀರ್ಣ ಕಟ್ಟಡದ ಉದ್ಘಾಟನೆ ಹಾಗೂ 25ನೇ ವರ್ಷದ ಬೆಳ್ಳಿ ಹಬ್ಬ ಸಮಾರಂಭವು ಇಂದು ಬೆಳಿಗ್ಗೆ 11.30ಕ್ಕೆ ಸಂಘದ ಆವರಣದಲ್ಲಿ ನಡೆಯಲಿದೆ.

ಸಹಕಾರ ಸಚಿವ ಕೆ.ಎನ್. ರಾಜಣ್ಣ ಕಚೇರಿ ಕಟ್ಟಡವನ್ನು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ವಾಣಿಜ್ಯ ಸಂಕೀರ್ಣವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಕೆ.ಎಸ್. ಬಸವಂತಪ್ಪ, ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಡಿ. ಪ್ರಕಾಶ್ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಕೊಗುಂಡಿ ಬಕ್ಕೇಶಪ್ಪ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಯ ನಿರ್ದೇಶಕ ಜೆ.ಆರ್. ಷಣ್ಮುಖಪ್ಪ, ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಜಿ.ಎನ್. ಸ್ವಾಮಿ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಭಯೋತ್ಪಾದಕರೊಂದಿಗೆ ಗುಂಡಿನ ಚಕಮಕಿ: ಸೇನೆ ಅಧಿಕಾರಿ ಹುತಾತ್ಮ

ಕಿಶ್ತ್ವಾರ್, ನ.10- ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ದೂರದ ಅರಣ್ಯ ಪ್ರದೇಶದಲ್ಲಿ ಭಾನುವಾರ ನಡೆದ ಭಯೋತ್ಪಾದಕರೊಂದಿಗಿನ ಗುಂಡಿನ ಚಕಮಕಿಯಲ್ಲಿ ಸೇನೆಯ ವಿಶೇಷ ಪಡೆಗಳ ಜ್ಯೂನಿಯರ್ ಕಮೀಷನ್ಡ್ ಆಫೀಸರ್ ಹುತಾತ್ಮರಾಗಿದ್ದರೆ, ಇನ್ನೂ ಮೂವರು ಸೈನಿಕರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚೆಗೆ ಇಬ್ಬರು ಗ್ರಾಮ ರಕ್ಷಣಾ ಸಿಬ್ಬಂದಿಯನ್ನು ಕೊಂದ ನಂತರ ಗುರುವಾರ ಸಂಜೆಯಿಂದ ಕುಂಟ್ವಾರಾ ಮತ್ತು ಕೇಶ್ವಾನ್ ಅರಣ್ಯಗಳಲ್ಲಿ ಅಡಗಿದ್ದ ಉಗ್ರರಿಗಾಗಿ ನಡೆಯುತ್ತಿದ್ದ ತೀವ್ರ ಶೋಧದ ನಡುವೆ ಈ ಕಾರ್ಯಾಚರಣೆ ನಡೆದಿದೆ. ಹುತಾತ್ಮರಾದ ಅಧಿಕಾರಿಯನ್ನು 2 ಪ್ಯಾರಾದ ನಾಯಬ್ ಸುಬೇದಾರ್ ರಾಕೇಶ್ ಕುಮಾರ್ ಎಂದು ಗುರುತಿಸಲಾಗಿದ್ದು, ಅವರ ಅತ್ಯುನ್ನತ ತ್ಯಾಗಕ್ಕೆ ಸೇನೆ ನಮನ ಸಲ್ಲಿಸಿದೆ.

## ನಗರದಲ್ಲಿಂದು ಓಬವ್ವ ಜಯಂತಿ

ದಾವಣಗೆರೆ, ನ.9- ಜಿಲ್ಲಾಡಳಿತ ಹಾಗೂ ಜಿಲ್ಲಾ ಛಲವಾದಿ ಮಹಾಸಭಾದ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರ ಸಭಾಂಗಣದಲ್ಲಿ ನಾಳೆ ದಿನಾಂಕ 11ರ ಸೋಮವಾರ ಬೆಳಿಗ್ಗೆ 11ಕ್ಕೆ ವೀರ ವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಎನ್. ರುದ್ರಮುನಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮತ್ತು ಅಧಿಕಾರಿಗಳು ಸೇರಿದಂತೆ ಗಣ್ಯರು ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ಅವರು, ನಗರದ ಯಾವುದಾದರೊಂದು ವೃತ್ತ ಹಾಗೂ ಮಾರ್ಗಕ್ಕೆ ಈ ವೀರ ವನಿತೆಯ ಹೆಸರನ್ನು ಸೂಚಿಸಿ ಗೌರವಿಸಬೇಕೆಂದು ಒತ್ತಾಯಿಸಿದರು.

ಮಹಾಸಭಾದ ಎಸ್. ಶೇಖರಪ್ಪ, ಡಾ. ಜಗನ್ನಾಥ್, ನಾಗಭೂಷಣ್, ಹೆಚ್. ಚಂದ್ರಪ್ಪ, ಕೊಟ್ರಬಸಪ್ಪ, ರೇವಣಸಿದ್ದಪ್ಪ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಸಮೀಕ್ಷಾ ಕಾರ್ಯ

ದಾವಣಗೆರೆ, ನ.10- ಜಿಲ್ಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇದೇ ದಿನಾಂಕ 15 ರಂದು ಏಕಕಾಲದಲ್ಲಿ ಅನೈರ್ಮಲ್ಯ ಶೌಚಾಲಯಗಳು ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಸಮೀಕ್ಷಾ ಕಾರ್ಯವನ್ನು ನಡೆಸಲಾಗುತ್ತದೆ.

ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಗ್ರಾಮ ಪಂಚಾಯತ್‌ಗಳ ಸಮೀಕ್ಷಾ ತಂಡದ ಪ್ರತಿನಿಧಿಗಳು ನಗರ, ಗ್ರಾಮಗಳಲ್ಲಿ ಸಮೀಕ್ಷೆ ನಡೆಸಲಿದ್ದು, ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳು ಖುದ್ದು ನಗರ, ಸ್ಥಳೀಯ ಸಂಸ್ಥೆಗಳ ಕಚೇರಿಗಳಿಗೆ ಹಾಜರಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ವ್ಯಾಪ್ತಿಯ ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಕಚೇರಿಗಳನ್ನು ಸಂಪರ್ಕಿಸಲು ಜಿಲ್ಲಾಧಿಕಾರಿ ಹಾಗೂ ಸ್ಕ್ಯಾವೆಂಜರ್ಸ್ ಸಮೀಕ್ಷಾ ಸಮಿತಿಯ ಅಧ್ಯಕ್ಷರಾದ ಜಿ.ಎಂ.ಗಂಗಾಧರ ಸ್ವಾಮಿ ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ

**ಗ್ರಾಮ ಪಂಚಾಯತ್ ಕಾರ್ಯಾಲಯ ಕನಗೊಂಡನಹಳ್ಳಿ**

ಸಂ:ಗ್ರಾಪಂ:ಕಾ: ಕನಗೊಂಡನಹಳ್ಳಿ:ಅ.ಟೆಂ::ಇ-ಪ್ರೊ: : 2024-25, ದಿನಾಂಕ : 28/10/2024

**ಅಲ್ಪಾವಧಿ ಟೆಂಡರ್ ಪ್ರಕಟಣೆ ('ಕೆಪಿಪಿಪಿ ಪ್ರೊಕ್ಯೂರ್‌ಮೆಂಟ್' ಮೂಲಕ)**

ಈ ಗ್ರಾಮ ಪಂಚಾಯತ್ ಕಛೇರಿಯಿಂದ ಕೆಳಕಂಡ ಕಾಮಗಾರಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್ ಕಾರ್ಯಾಲಯ, ಕನಗೊಂಡನಹಳ್ಳಿ, ದಾವಣಗೆರೆ, ಇವರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರಕ್ಯೂರ್ ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ-ಪ್ರೊಕ್ಯೂರ್ ಮೆಂಟ್ ಮುಖಾಂತರ ಐಟಂವಾರು ದ್ವಿಲಕೋಟೆ ಟೆಂಡರ್‌ಗಳನ್ನು Standard Tender Documents for procurement of works ನಮೂನೆಯಲ್ಲಿ ಆಹ್ವಾನಿಸಲಾಗಿದೆ.

1 ಖಾಲಿ ಟೆಂಡರ್ ದಾಖಲಾತಿಗಳಿಗಾಗಿ ಅರ್ಜಿ ಸ್ವೀಕರಿಸುವ ಹಾಗೂ ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ : 11.11.2024, ಸಂಜೆ 4.00 ಗಂಟೆಗೆ
2 ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 12.11.2024, ಸಂಜೆ 4.30 ಗಂಟೆಗೆ
3 ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 12.11.2024, ಸಂಜೆ 5.00 ಗಂಟೆಗೆ

| ಕ್ರ. ಸಂ. | ಕಾಮಗಾರಿ ಹೆಸರು | ಟೆಂಡರ್‌ಗೆ ಇಡಲಾದ ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ಮೊತ್ತ ರೂ. ಗಳಲ್ಲಿ | ಖಾಲಿ ಟೆಂಡರ್ ಫಾರಂ ಬೆಲೆ (ತೆರಿಗೆ ಸೇರಿಸಿಕೊಂಡು) ರೂ. ಗಳಲ್ಲಿ | ಕಾಮಗಾರಿ ಮುಗಿಸುವ ಅವಧಿ | ಗುತ್ತಿಗೆದಾರರ ಅರ್ಹತೆ | ಟೆಂಡರ್ ನಮೂನೆ | ಮೀಸಲಾತಿ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 2017-2018ನೇ ಸಾಲಿನ ಗ್ರಾಮ ವಿಕಾಸ ಯೋಜನೆ | | | | | | | | |
| 1 | ದಾವಣಗೆರೆ ತಾಲ್ಲೂಕು ಜಡಗನಹಳ್ಳಿ ಗ್ರಾಮದ ಕನಕದಾಸ ಬಡಾವಣೆಯಲ್ಲಿ ಆಂಜನೇಯ ದೇವಾಲಯ ಕಟ್ಟಡ ನಿರ್ಮಾಣ ಕಾಮಗಾರಿ. | 8.00 | 20000.00 | ಕೆ.ಪಿ.ಪಿ.ಪಿ ಪೋರ್ಟಲ್ | 4 ತಿಂಗಳು | 4ನೇ ದರ್ಜೆ ಮತ್ತು ಮೇಲ್ಪಟ್ಟು | KWI | ಸಾಮಾನ್ಯ |

**ಷರತ್ತುಗಳು**

1. ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯ ಹಾಲಿ ನೋಂದಾಯಿತ ಗುತ್ತಿಗೆದಾರರಾಗಿರಬೇಕು. ಗುತ್ತಿಗೆದಾರರ ನೋಂದಣಿ ಸಂಖ್ಯೆ ಮತ್ತು ದಿನಾಂಕ ಹಾಗೂ GST ಸಂಖ್ಯೆಗಳನ್ನು ನಮೂದಿಸಿರಬೇಕು.
2. ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂಗಳಿಗೆ ಮತ್ತು EMDಗೆ ನಿಗದಿಪಡಿಸಿದ ಹಣವನ್ನು e- payment ಅಥವಾ NEFT challan ಮೂಲಕ ಸಲ್ಲಿಸತಕ್ಕದ್ದು, ಖಾಲಿ ಟೆಂಡರ್ ಫಾರಂ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ.
3. ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಷರತ್ತು ಮತ್ತು ನಿಬಂಧನೆಗಳನ್ನು ಇ-ಪೋರ್ಟಲ್‌ನಲ್ಲಿ ವಿವರಿಸಿದಂತೆ ಅಪ್ ಲೋಡ್ ಮಾಡುವುದು.
4. ಖಾಲಿ ಟೆಂಡರ್ ಡಾಕ್ಯೂಮೆಂಟನ್ನು www.KPPP.karnataka.gov.in ವೆಬ್ ಸೈಟಿನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ:8970331590ರಿಂದ ವೇಳೆಯಲ್ಲಿ ಪಡೆಯಬಹುದು.
5. ಗುತ್ತಿಗೆದಾರರು ನಮೂದಿಸಿದ ದರವು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವ್ಯತ್ಯಾಸದ ಮೊತ್ತವನ್ನು ಹಾಗೂ KW ನಿಯಮಾನುಸಾರ ಟೆಂಡರ್ ಕರಾರು ಮಾಡುವ ಮುಂಚೆ ಅನುಮೋದನೆಯಾದ ಮೊತ್ತಕ್ಕೆ ಶೇ.5 ರಂತೆ ಭದ್ರತಾ ಠೇವಣಿಯನ್ನು FDR ರೂಪದಲ್ಲಿ ನೀಡಬೇಕು.
6. ಸರ್ಕಾರಿ ಆದೇಶದಂತೆ ಲೇಬರ್ ಸೆಸ್ ಶೇ.1% ರಂತೆ ಬಿಲ್ಲಿನಲ್ಲಿ ಕಡಿತ ಮಾಡಲಾಗುವುದು.
7. ಕಾಮಗಾರಿಗಳಿಗಾಗಿ ಬೇಕಾಗುವ ಸಿಮೆಂಟ್, ಕಬ್ಬಿಣ ಹಾಗೂ ಇತ್ಯಾದಿ ಸಾಮಾಗ್ರಿಗಳನ್ನು ಗುತ್ತಿಗೆದಾರರೇ ಸರಬರಾಜು ಮಾಡಿಕೊಳ್ಳಬೇಕಾಗಿರುವುದರಿಂದ, ಸದರಿ ಸಾಮಗ್ರಿಗಳು ಐ.ಎಸ್.ಐ. ತಾಂತ್ರಿಕ ಗುಣಮಟ್ಟ ಹೊಂದಿರಬೇಕು ಹಾಗೂ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಯನ್ನು ಕಾಮಗಾರಿ ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಿ ವರದಿಗಳನ್ನು ಒದಗಿಸಬೇಕು.
8. ಯಾವುದೇ ಕಾರಣವನ್ನು ನೀಡದೇ ಟೆಂಡರ್ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಳ್ಳಲಾಗಿದೆ. ಯಾವುದೇ ಕಾರಣಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕ ಜಾಲ (ಆನ್‌ಲೈನ್ ) ಸಿಗದಿದ್ದರೆ ಈಚೇರಿ ಜವಬ್ದಾರಿ ಅಲ್ಲ.
9. ಟೆಂಡರ್ ಅನುಮೋದನೆಯಾದ ಗುತ್ತಿಗೆದಾರರಿಗೆ ಒಪ್ಪಿಗೆ ಪತ್ರ ತಲುಪಿದ 20 ದಿನದೊಳಗಾಗಿ ಕಾರ್ಯಾದೇಶ ಮಾಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ KW ನಿಯಮಾವಳಿ ಪ್ರಕಾರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್ ರದ್ದು ಪಡಿಸಲಾಗುವುದು ಹಾಗೂ ಈ ಬಗ್ಗೆ ಮತ್ಯಾವುದೇ ಪತ್ರ ವ್ಯವಹಾರ ನಡೆಸಲಾಗುವುದಿಲ್ಲ.
10. ಟೆಂಡರ್ ಕಾಮಗಾರಿ ಪೂರ್ಣಗೊಂಡ ನಂತರ 1 ವರ್ಷಗಳ ಕಾಲ ನಿರ್ವಹಣೆಯ ಜವಾಬ್ದಾರಿ ಗುತ್ತಿಗೆದಾರರವರದೇ ಆಗಿರುತ್ತದೆ.
11. ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಮತ್ತು ವಿಶೇಷ ಕಾಯ್ದೆ 2000 ಅಡಿಯಲ್ಲಿ ಗೊತ್ತುಪಡಿಸಿರುವ ಪಾರದರ್ಶಕ ನಿಯಮ, ನಿಬಂಧನೆಗಳು ಹಾಗೂ ಆಡಳಿತಾತ್ಮಕ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳು ಅನ್ವಯಿಸುತ್ತವೆ.

**ಪಂಚಾಯತ್ ಅಭಿವೃದ್ಧಿ ಅಧಿಕಾರಿ,**
**ಗ್ರಾಮ ಪಂಚಾಯತ್, ಕನಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು, ಜಿಲ್ಲೆ.**



## ಸಾರ್ವಜನಿಕ ತಿಳುವಳಿಕೆ ನೋಟಿಸ್

ನಮ್ಮ ಕಕ್ಷಿದಾರರಾದ ದಾವಣಗೆರೆ ಸಿಟಿ ಕಾಯಿಪೇಟೆ ವಾಸಿಯಾದ ದಿವಂಗತ ಶ್ರೀಮತಿ ಸುವರ್ಣಮ್ಮ ಕೋಂ ದಿವಂಗತ ಎಂ.ಸಂಗಪ್ಪ ಇವರ ಮಕ್ಕಳಾದ ಶ್ರೀ ಎಂ.ರಾಜಶೇಖರ್ ಮತ್ತು ಶ್ರೀ ಎಂ.ಮುರುಗೇಶ್ ಇವರು ನೀಡಲಿರುವ ಈ ಮೂಲಕ ಸಾರ್ವಜನಿಕ ತಿಳುವಳಿಕೆ ನೋಟಿಸ್ ಏನೆಂದರೆ, ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಎಲ್ಲಾ ಸ್ವತ್ತುಗಳು ನಮ್ಮ ಕಕ್ಷಿದಾರರ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ದಾವಣಗೆರೆ ಮಹಾನಗರಪಾಲಿಕೆ ಕಚೇರಿಯಲ್ಲಿ 1ನೇ ಷೆಡ್ಯೂಲ್ ಸ್ವತ್ತು ನಮ್ಮ ಕಕ್ಷಿದಾರರ ಹೆಸರಿಗೆ ಜಂಟಿಯಾಗಿ ಖಾತೆಯಿರುತ್ತದೆ. 2ನೇ ಮತ್ತು 3ನೇ ಷೆಡ್ಯೂಲ್ ಸ್ವತ್ತುಗಳು ನಮ್ಮ ಕಕ್ಷಿದಾರರ ದೊಡ್ಡಮ್ಮ ದಿವಂಗತ ಶ್ರೀಮತಿ ಮಹದೇವಮ್ಮ ಕೋಂ ದಿವಂಗತ ಎಸ್.ಮುರಿಗೆಪ್ಪ ಇವರ ಮಕ್ಕಳು ಹಾಗೂ ಮೊಮ್ಮಕ್ಕಳಾದ (1) ಶ್ರೀಮತಿ ಸರ್ವಮಂಗಳ ಕೋಂ ದಿವಂಗತ ಬಸವಲಿಂಗಪ್ಪ, (2) ಶ್ರೀ ಎಸ್.ಎಂ. ನಾಗರಾಜ ಬಿನ್ ದಿವಂಗತ ಎಸ್.ಮುರಿಗೆಪ್ಪ, (3) ಶ್ರೀಮತಿ ಅನುಸೂಯ ಕೋಂ ಜಿ. ಚಂದ್ರಶೇಖರಪ್ಪ, (4) ಶ್ರೀ ಎಸ್.ಎಂ. ಬಸವರಾಜ ಬಿನ್ ದಿವಂಗತ ಎಸ್.ಮುರಿಗೆಪ್ಪ, (5) ಶ್ರೀ ಎಸ್.ಎಂ.ಲೋಕೇಶ್ ಬಿನ್ ದಿವಂಗತ ಎಸ್.ಮುರಿಗೆಪ್ಪ ಮತ್ತು (6) ಶ್ರೀಮತಿ ವೀಣಾ ಎಸ್.ಎಲ್. ಕೋಂ ಎಸ್.ಎಂ.ಲೋಕೇಶ್ ಹಾಗೂ (7) ಶ್ರೀಮತಿ ಗೀತಾ ಸೊಲ್ಲಾಪುರ ಇವರುಗಳ ಹೆಸರಿಗೆ ಜಂಟಿಯಾಗಿ ಖಾತೆಯಿರುತ್ತದೆ.

ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಎಲ್ಲಾ ಸ್ವತ್ತುಗಳ ಬಾವಿಜಾಗ ಮತ್ತು ಕಾಮನ್ ಪ್ಯಾಸೇಜ್ ಜಾಗದಲ್ಲಿ ನಮ್ಮ ಕಕ್ಷಿದಾರರು ಕಾನೂನುಬದ್ಧ ಮಾಲೀಕತ್ವದ ಹಕ್ಕು ಹಾಗೂ ಹಿತಾಸಕ್ತಿಯನ್ನು ಹೊಂದಿರುತ್ತಾರೆ. ನಮ್ಮ ಕಕ್ಷಿದಾರರ ದೊಡ್ಡಮ್ಮ ದಿವಂಗತ ಶ್ರೀಮತಿ ಮಹದೇವಮ್ಮ ಕೋಂ ದಿವಂಗತ ಎಸ್.ಮುರಿಗೆಪ್ಪ ಇವರ ವಾರಸುದಾರರಾದ ಈ ಮೇಲ್ಕಂಡ ಮಕ್ಕಳು ಹಾಗೂ ಮೊಮ್ಮಕ್ಕಳು, ನಮ್ಮ ಕಕ್ಷಿದಾರರಿಗೆ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ನಮ್ಮ ಕಕ್ಷಿದಾರರ ಗಮನಕ್ಕೆ ತರದೇ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತುಗಳನ್ನು ಮಾರಾಟ ಮಾಡಿ, ಹಕ್ಕು-ವರ್ಗಾವಣೆ ಮಾಡಿಕೊಡಲು ಹುನ್ನಾರಕ್ಕೆ ಮುಂದಾಗಿರುವುದು ನಮ್ಮ ಕಕ್ಷಿದಾರರಿಗೆ ತಿಳಿದು ಬಂದಿರುತ್ತದೆ. ಒಂದು ವೇಳೆ ಯಾರಾದರೂ ಈ ಪ್ರಕಟಣೆಯ ದಿನಾಂಕದಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಖರೀದಿಸಲು ಇಚ್ಛಿಸಿದ್ದಲ್ಲಿ, ತಪ್ಪದೇ ನಮ್ಮ ಕಕ್ಷಿದಾರರ ಗಮನಕ್ಕೆ ತರದೇ ಯಾವುದೇ ವ್ಯವಹಾರವನ್ನು ಮಾಡಬಾರದೆಂದೂ ಸಾರ್ವಜನಿಕವಾಗಿ ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ನಮ್ಮ ಕಕ್ಷಿದಾರರ ಗಮನಕ್ಕೆ ತಾರದೇ ಕಾನೂನು ಬಾಹಿರವಾಗಿ ಖರೀದಿ ಮತ್ತು ಹಣದ ಪತ್ರ ವ್ಯವಹಾರವನ್ನು ಮಾಡಿದ್ದಲ್ಲಿ, ಮುಂದೆ ಆಗಬಹುದಾದ ಕಾನೂನು ತೊಡಕುಗಳಿಗೆ ನೀವೇ ಜವಾಬ್ದಾರರಾಗಿರುತ್ತೀರಿ ಹಾಗೂ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತುಗಳ ಬಗ್ಗೆ ಖರೀದಿ ಮತ್ತು ಹಣದ ಪತ್ರ ವ್ಯವಹಾರದಿಂದ ಇನ್ನುಮುಂದೆ ಆಗಬಹುದಾದ ನಷ್ಟ / ಹೊಣೆಗಾರಿಕೆಗೆ ನಮ್ಮ ಕಕ್ಷಿದಾರರರು ಯಾವುದೇ ಜವಾಬ್ದಾರರಾಗಿರುವುದಿಲ್ಲ ತಿಳಿಯಿರಿ.

ಷೆಡ್ಯೂಲ್ :- **(1)** ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಕಚೇರಿಗೆ ಒಳಪಟ್ಟ ದಾವಣಗೆರೆ ಸಿಟಿ, ಕಾಯಿಪೇಟೆ ಹಿಂಭಾಗದ ವ್ಯಾಪ್ತಿಯಲ್ಲಿ ಬರತಕ್ಕ ಡೋರ್ ನಂ.499/2, ವಿಸ್ತೀರ್ಣ : ಪೂ-ಪ 3.90, ಉ-ದ 6.80 ಮೀಟರ್‌ವುಳ್ಳ ನಿವೇಶನ ಸೊತ್ತುಗೆ ಚೆಕ್ಕುಬಂದಿ : ಪೂರ್ವಕ್ಕೆ : ಭಜರಂಗ್‌ಸಿಂಗ್ ರಾಜಪುರೋಹಿತ್, ಪಶ್ಚಿಮಕ್ಕೆ : ಶ್ರೀಮತಿ ಸಂಗೀತ ಮತ್ತು ಶ್ರೀ ಎಂ ಬಸವರಾಜ್‌ರವರ ಮನೆ, ಉತ್ತರಕ್ಕೆ : ಡೋರ್ ನಂ.496/1, ದಕ್ಷಿಣಕ್ಕೆ : ಡೋರ್ ನಂ.499/3. ಈ ಮಧ್ಯದ ಸ್ವತ್ತು.

**(2)** ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಕಚೇರಿಗೆ ಒಳಪಟ್ಟ ದಾವಣಗೆರೆ ಸಿಟಿ, ಕಾಯಿಪೇಟೆ ಹಿಂಭಾಗದ ವ್ಯಾಪ್ತಿಯಲ್ಲಿ ಬರತಕ್ಕ ಡೋರ್ ನಂ.499/3, ವಿಸ್ತೀರ್ಣ : ಪೂಪ 3.60, ಉ-ದ 8.00 ಮೀಟರ್‌ವುಳ್ಳ ನಿವೇಶನ ಸೊತ್ತುಗೆ ಚೆಕ್ಕುಬಂಧಿ : ಪೂರ್ವಕ್ಕೆ : ಕಾಮನ್ ಪ್ಯಾಸೇಜ್ ಮತ್ತು ಭಜರಂಗ್‌ಸಿಂಗ್ ರಾಜಪುರೋಹಿತ್, ಪಶ್ಚಿಮಕ್ಕೆ : ಶ್ರೀಮತಿ ಸಂಗೀತ ಮತ್ತು ಶ್ರೀ ಎಂ. ಬಸವರಾಜ್‌ರವರ ಮನೆ, ಉತ್ತರಕ್ಕೆ : ಡೋರ್ ನಂ.499/2, ದಕ್ಷಿಣಕ್ಕೆ: ಬಾವಿಜಾಗ ಮತ್ತು ಡೋರ್ ನಂ.500. ಈ ಮಧ್ಯದ ಸ್ವತ್ತು.

(3) ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಕಚೇರಿಗೆ ಒಳಪಟ್ಟ ದಾವಣಗೆರೆ ಸಿಟಿ, ಕಾಯಿಪೇಟೆ ಹಿಂಭಾಗದ ವ್ಯಾಪ್ತಿಯಲ್ಲಿ ಬರತಕ್ಕ ಡೋರ್ ನಂ.500, ವಿಸ್ತೀರ್ಣ : ಪೂ-ಪ 3.60, ಉ-ದ 6.00 ಮೀಟರ್‌ವುಳ್ಳ ನಿವೇಶನ ಸೊತ್ತುಗೆ ಚೆಕ್ಕುಬಂಧಿ : ಪೂರ್ವಕ್ಕೆ : ಕಾಮನ್ ಪ್ಯಾಸೇಜ್ ಮತ್ತು ಬಜರಂಗ್‌ಸಿಂಗ್ ರಾಜಪುರೋಹಿತ್, ಪಶ್ಚಿಮಕ್ಕೆ: ಶ್ರೀಮತಿ ಸಂಗೀತ ಮತ್ತು ಶ್ರೀ ಎಂ ಬಸವರಾಜ್‌ರವರ ಮನೆ, ಉತ್ತರಕ್ಕೆ : ಬಾವಿ ಜಾಗ ಮತ್ತು ಡೋರ್ ನಂ.499/3, ದಕ್ಷಿಣಕ್ಕೆ : ಸಿಟಿ ಮುನ್ಸಿಪಲ್ ರಸ್ತೆ. ಈ ಮಧ್ಯದ ಸ್ವತ್ತು.

ಕಕ್ಷಿದಾರರು :
**ಎಂ.ರಾಜಶೇಖರ್ ಮತ್ತು ಎಂ.ಮುರುಗೇಶ್**
ವಾಸ : # 496/1, ಕಾಯಿಪೇಟೆ,
ದಾವಣಗೆರೆ ಸಿಟಿ. ಮೊ.ಸಂ.: 99641-33430

ಸಹಿ/-
**ಎನ್. ಕರಿಬಸಪ್ಪ** ಬಿ.ಕಾಂ., ಎಲ್.ಎಲ್.ಬಿ.,
ವಕೀಲರು, ದಾವಣಗೆರೆ ಸಿಟಿ.
ಮೊ.ಸಂ. : 94482-33330


## ತೋಟಗಾರಿಕೆ ಬೆಳೆ ಬೆಳೆಯಲು ಅರ್ಜಿ ಆಹ್ವಾನ

ದಾವಣಗೆರೆ ನ. 10 - ರಾಷ್ಟ್ರೀಯ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, 2025-26 ನೇ ಸಾಲಿನಲ್ಲಿ ಜಿಲ್ಲೆಯ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನ ಗ್ರಾಮ ಪಂಚಾಯಿತಿಯಲ್ಲಿ ಹೊಸದಾಗಿ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ರೈತರು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ, ಹೊನ್ನಾಳಿ ಅಥವಾ ಹೋಬಳಿ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಲು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

# ಕನ್ನಡ ಭಾಷೆಯ ಅಸ್ಮಿತೆ ಕಾಪಾಡಬೇಕಿದೆ

## ಜಗಳೂರಿನ ರಾಜ್ಯೋತ್ಸವದಲ್ಲಿ ರೂಪೇಶ್ ರಾಜಣ್ಣ ಅಭಿಮತ

ಜಗಳೂರು,ನ.10- ಕನ್ನಡ ಭಾಷೆಯ ಅಸ್ತಿತ್ವ, ಅಸ್ಮಿತೆ ಕಾಪಾಡುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಎಂದು ಯುವ ಕರ್ನಾಟಕ ವೇದಿಕೆ ರಾಜ್ಯಾಧ್ಯಕ್ಷ ಬಿಗ್ ಬಾಸ್ ಖ್ಯಾತಿಯ ರೂಪೇಶ್ ರಾಜಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಬಯಲು ರಂಗಮಂದಿರ ಅವರಣದಲ್ಲಿ ಯುವ ಕರ್ನಾಟಕ ವೇದಿಕೆ ತಾಲೂಕು ಘಟಕದ ಪದಗ್ರಹಣ, ಕನ್ನಡ ರಾಜ್ಯೋತ್ಸವ ಮತ್ತು ರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯಕ್ಕೆ ಕನ್ನಡ ಭಾಷೆಯೇ ಸಾರ್ವಭೌಮವಾಗಿದ್ದು. ಯುವ ಕರ್ನಾಟಕ ವೇದಿಕೆ ಕುವೆಂಪು, ಬುದ್ಧ, ಬಸವ, ಅಂಬೇಡ್ಕರ್ ಅವರ ಆಶಯಗಳ ಈಡೇರಿಕೆಗಾಗಿ ಜಾತ್ಯಾತೀತ ವಾದ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಕರ್ನಾಟಕದ ಉದ್ದಗಲಕ್ಕೂ ವಿಸ್ತರಣೆಗೊಂಡು ಬಲಿಷ್ಠ ಸಂಘಟನೆಯಾಗಿ ಹೊರ ಹೊಮ್ಮುತ್ತಿದೆ ಎಂದರು.

ದ್ವೇಷದಿಂದ ಸಾಧನೆ ಅಸಾಧ್ಯ. ಸ್ನೇಹದಿಂದ ಕನ್ನಡಿಗರ ಮನಗೆದ್ದು ಕನ್ನಡ ನಾಡು, ನು,ಡಿ ನೆಲ, ಜಲ ಸಂರಕ್ಷಣೆಗೆ ಧಕ್ಕೆ ಉಂಟಾದರೆ ಪ್ರಾಣ ತ್ಯಾಗಕ್ಕೂ ಸಿದ್ದರಾಗೋಣ. ರೈತ, ಮಹಿಳೆ, ಕಾರ್ಮಿಕರ ಧ್ವನಿಯಾಗಿ ಹೊರಾಟ ರೂಪಿಸಲು ಸರ್ವರೂ ಕೈಜೋಡಿಸಬೇಕೆಂದು ಕರೆ ನೀಡಿದರು.

ಬೆಳಗಾವಿಯಲ್ಲಿ ನಡೆದ ಎಂಇಎಸ್ ಪುಂಡಾಟಿಕೆ ವಿರುದ್ಧ ಯುವ ಕರ್ನಾಟಕ ವೇದಿಕೆ ಮುಂಚೂಣಿ ನಾಯಕತ್ವ ವಹಿಸಿತ್ತು. ಬೆಂಗಳೂರಿನಲ್ಲಿ ಹೊರ ರಾಜ್ಯಗಳ ದಬ್ಬಾಳಿಕೆ ಖಂಡಿಸಿ, ಆಂಗ್ಲಭಾಷೆ ನಾಮಫಲಕ ತೆರವುಗೊಳಿಸಲು ನಿರಂತರ ಹೊರಾಟ ನಡೆಸುತ್ತಿದೆ. ಸಂಘಟನಾಕಾರರು ಸಾಮಾಜಿಕ ಜಾಲತಾಣಗಳಲ್ಲಿ ಸಾಮರಸ್ಯ ಕದಡುವವರನ್ನು ತಿರಸ್ಕರಿಸಿ, ಸಮಾಜದ ಸ್ವಾಸ್ಥ್ಯ ಕಾಪಾಡಬೇಕು ಎಂದು ಸಲಹೆ ನೀಡಿದರು.

ಅಂಬೇಡ್ಕರ್ ಸೇನೆ ರಾಜ್ಯಾಧ್ಯಕ್ಷ ನಟ, ನಿರ್ದೇಶಕ ಪಿ. ಮೂರ್ತಿ ಮಾತನಾಡಿ, ಕರ್ನಾಟಕ ರಾಜ್ಯ ವಲಸಿಗರಿಗೆ ಉದ್ಯೋಗದ ಆಶ್ರಯ ತಾಣವಾಗಿದೆ. ಉದ್ಯೋಗ ಹರಸಿ ಬಂದವರು ಕರ್ನಾಟಕದಲ್ಲಿ ತಮ್ಮ ಮಾತೃ ನಾಡಿನ ಭಾಷಾ ಪ್ರಭುತ್ವ ಹಿಡಿತ ಸಾಧಿಸಲು ಹೊರಟಿರುವುದು ಕನ್ನಡ ನಾಡಿನಲ್ಲಿ ಆತಂಕಕಾರಿ ಬೆಳವಣಿಗೆ. ಸಂವಿಧಾನಬದ್ದ ಹಕ್ಕು, ಮೀಸಲಾತಿ ಅನುಭವಿಸುತ್ತಿರುವವರು ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರನ್ನು ವಿರೋಧಿಸುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು.

ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ಕನ್ನಡ ನಾಡು, ನುಡಿಯ ಸೇವೆ, ಸಾಮಾಜಿಕ ಕಳಕಳಿ, ಸಂಘಟನೆ ಚತುರತೆ ಮೈಗೂಡಿಸಿಕೊಂಡಿರುವ ಬರ್ಕತ್ ಅಲಿ ಅವರು ಯುವ ಸಮೂಹಕ್ಕೆ ಆದರ್ಶವಾಗಿದೆ. ನಿರಾಶ್ರಿತ ವಯೋವೃದ್ಧರಿಗೆ ಲಾಲಾನೆ, ಪಾಲನೆ ಮಾಡುತ್ತಿರುವ ಜನಸ್ನೇಹಿ ಚಾರಿಟಬಲ್ ಟ್ರಸ್ಟ್ ರಾಜ್ಯಕ್ಕೆ ಮಾದರಿ ಎಂದರು.

ಶೈನಿಂಗ್ ಸ್ಟಾರ್ ಕಲಾತಂಡದಿಂದ ರಸಮಂಜರಿ ಕಾರ್ಯಕ್ರಮ ಜರುಗಿತು. ಇದೇ ಸಂದರ್ಭದಲ್ಲಿ ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ಮುಖಂಡರಾದ ಕೆ.ಪಿ. ಪಾಲಯ್ಯ, ಚಲಚಿತ್ರನಟ ಸುನಾಮಿ ಕಿಟ್ಟಿ, ಯುವ ಕರ್ನಾಟಕ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಸಯ್ಯದ್ ಶಫಿ, ತಾಲೂಕು ಗೌರವ ಅಧ್ಯಕ್ಷ ಬರ್ಕತ್ ಅಲಿ, ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ್, ಉಪಾಧ್ಯಕ್ಷ ನಾಗರಾಜ್ ಮರೇನಹಳ್ಳಿ, ಸಂಚಾಲಕ ಚಿಕ್ಕಮ್ಮನಹಟ್ಟಿ ಶ್ರೀಕಾಂತ್, ನರಸಿಂಹಮೂರ್ತಿ, ಕಾನೂನು ಸಲಹೆಗಾರ ಟಿ.ಬಸವರಾಜ್, ವಕೀಲ ತಿಪ್ಪೇಸ್ವಾಮಿ, ಬಿ.ಮಹೇಶ್ವರಪ್ಪ, ಜೈಭಾರತ್ ಟ್ರಸ್ಟ್ ನ ನಬೀಉಲ್ಲಾ, ಜನಸ್ನೇಹಿ ಟ್ರಸ್ಟ್ ನ ಯೋಗೇಶ್, ಮಹೇಶ್ ಸೇರಿದಂತೆ ಪ.ಪಂ. ಸದಸ್ಯರು, ಮುಖಂಡರು ಉಪಸ್ಥಿತರಿದ್ದರು.



# ಕನ್ನಡ ಉಳಿಸಿ, ಬೆಳೆಸಲು ನಾವೆಲ್ಲರೂ ಶ್ರಮಿಸೋಣ

## ಎಂಸಿಸಿ 'ಬಿ' ಬ್ಲಾಕ್‌ನ ಕನ್ನಡ ರಾಜ್ಯೋತ್ಸವ ಸಂಭ್ರಮದಲ್ಲಿ ಗಡಿಗುಡಾಳ್ ಮಂಜುನಾಥ್

ದಾವಣಗೆರೆ, ನ.10- ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ನಾಗರಿಕರು, ವಾರ್ಡ್‌ನ ಪ್ರಮುಖರು ಸೇರಿ ಮಹಾನಗರಪಾಲಿಕೆಯ ಸದಸ್ಯ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ನೇತೃತ್ವದಲ್ಲಿ ಕನ್ನಡ ದಿನಾಚರಣೆಯನ್ನು ಆಚರಿಸಿದರು.

ಈ ವೇಳೆ ಮಾತನಾಡಿದ ಗಡಿಗುಡಾಳ್ ಮಂಜುನಾಥ್, ಕನ್ನಡ ನಾಡು-ನುಡಿ, ಸಂಸ್ಕೃತಿ, ಪರಂಪರೆ ಸಂರಕ್ಷಣೆಗೆ ಶ್ರಮಿಸಿದವರನ್ನು ನೆನಪು ಮಾಡಿಕೊಳ್ಳುವ ಮೂಲಕ ಮಹನೀಯರಿಗೆ ಗೌರವ ಸಲ್ಲಿಸುವ ಕೆಲಸ ಮಾಡೋಣ. ಅವರ ಆಶಯಗಳಂತೆ ಕನ್ನಡ ಉಳಿಸಿ ಬೆಳೆಸಲು ಶ್ರಮಿಸೋಣ ಎಂದು ಕರೆ ನೀಡಿದರು.

ಕನ್ನಡ ನಾಡು-ನುಡಿ, ಇತಿಹಾಸಕ್ಕೆ ತನ್ನದೇ ಆದ ವಿಶಿಷ್ಟ, ಮಹತ್ವ, ಪ್ರಾಮುಖ್ಯತೆ ಇದೆ. ಬೇರೆ ಭಾಷೆಗಳಿಗೆ ಹೋಲಿಸಿದರೆ ಕನ್ನಡವೇ ಶ್ರೇಷ್ಠ. ಕನ್ನಡ ನುಡಿಯೇ ಚೆಂದ. ಕನ್ನಡ ಸಂಸ್ಕೃತಿ ಪರಂಪರೆಯೇ ಅಂದ. ಇಂಥ ಮಹೋನ್ನತ ಇತಿಹಾಸ ಹೊಂದಿರುವ ಕನ್ನಡ ಭಾಷೆಯನ್ನು ಉಳಿಸಬೇಕಾದ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು.



ಕನ್ನಡ ಆಡಳಿತ ಭಾಷೆಯಾಗಿದ್ದರೂ ಪರಭಾಷೆಗಳ ಹಾವಳಿ ಹೆಚ್ಚಾಗುತ್ತಿದೆ. ಇದಕ್ಕೆ ಕಡಿವಾಣ ಹಾಕುವ ಕೆಲಸ ಆಗಬೇಕಿದೆ. ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ. ಕನ್ನಡ ಭಾಷೆಯ ಮೇಲೆ ಎಲ್ಲರೂ ಅಭಿಮಾನ ಬೆಳೆಸಬೇಕು. ಮಾತೃಭಾಷೆಯನ್ನು ಪ್ರೀತಿಸುವ, ಗೌರವಿಸುವ ಮನೋಭಾವ ನಮಗಷ್ಟೇ ಅಲ್ಲ ಮಕ್ಕಳಿಗೂ ಕಲಿಸಿಕೊಡಬೇಕಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಬೆನ್ನೇರಿ ಹೊರಟಿರುವವರಿಗೆ ಕನ್ನಡ ಭಾಷೆಯ ಬಗ್ಗೆ ತಿಳಿಸಿಕೊಡೋಣ ಎಂದು ಕರೆ ನೀಡಿದರು.

ನಗರದಲ್ಲಿ ಕನ್ನಡ ಭಾಷೆ ಸೇರಿದಂತೆ ಹಲವು ಹೋರಾಟಗಳಲ್ಲಿ ಪಾಲ್ಗೊಂಡವರು ಇದ್ದಾರೆ. ಅವರನ್ನು ಗುರುತಿಸಿ ಗೌರವಿಸುವ ಜೊತೆಗೆ ಮಹನೀಯರ ಕಾರ್ಯ ತಿಳಿಸಿಕೊಡುವ ಕೆಲಸ ಮಾಡೋಣ ಎಂದು ಹೇಳಿದರು.

## ಗುಂಡಿನ ಚಕಮಕಿ ಸೈನ್ಯದ ಜೆಸಿಒ ಹುತಾತ್ಮ

ಜಮ್ಮು, ನ. 10 - ಜಮ್ಮು-ಕಾಶ್ಮೀರದ ಕಿಶ್ತವರ್ ಜಿಲ್ಲೆಯಲ್ಲಿ ದುರ್ಗಮ ಅರಣ್ಯ ಪ್ರದೇಶದಲ್ಲಿ ಉಗ್ರರ ಜೊತೆ ನಡೆಸಲಾದ ಗುಂಡಿನ ಚಕಮಕಿಯಲ್ಲಿ ಸೈನ್ಯದ ವಿಶೇಷ ಪಡೆಗಳ ಜೆಸಿಒ ಹುತಾತ್ಮರಾಗಿದ್ದಾರೆ. ಇತರೆ 3 ಸೈನಿಕರು ಗಾಯಗೊಂಡಿದ್ದಾರೆ.

ಕಾರ್ಯಾಚರಣೆ ವೇಳೆ ಸೈನ್ಯದ ಜ್ಯೂನಿಯರ್ ಕಮೀಷನ್ಡ್ ಆಫೀಸ್ (ಜೆಸಿಒ) ನಯೀಬ್ ಸುಬೇದಾರ್ ರಾಕೇಶ್ ಕುಮಾರ್ ಅವರು ಹುತಾತ್ಮರಾಗಿದ್ದಾರೆ.

ಉಗ್ರರು ಗ್ರಾಮ ರಕ್ಷಣಾ ಗಾರ್ಡ್‌ಗೆ ಸೇರಿದ ಇಬ್ಬರನ್ನು ಹತ್ಯೆಗೈದಿದ್ದರು. ನಂತರ ಉಗ್ರರ ವಿರುದ್ಧ ಕಾರ್ಯಾಚರಣೆ ಆರಂಭಿಸಲಾಗಿತ್ತು.

## ಗಂಗಾ ಉಗಮ ಸ್ಥಳದಲ್ಲೇ ಮಲಿನ

ನವದೆಹಲಿ, ನ. 10 - ಗಂಗಾ ನದಿ ಉಗಮ ಸ್ಥಾನದಲ್ಲೇ ಮಲಿನವಾಗಿದೆ ಎಂದು ಉತ್ತರಾಖಂಡ ಸರ್ಕಾರ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣಕ್ಕೆ ನೀಡಿರುವ ವರದಿಯಲ್ಲಿ ತಿಳಿಸಿದೆ.

ಉತ್ತರಾಖಂಡದಲ್ಲಿ ಗಂಗಾ ನದಿ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಕರಣ ವಿಚಾರಣೆ ನಡೆಸುವಾಗ ಈ ಮಾಹಿತಿ ನೀಡಲಾಗಿದೆ.

ಗಂಗಾ ನದಿಯ ಉಗಮ ಸ್ಥಾನವಾದ ಗಂಗೋತ್ರಿಯಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕದಿಂದ ಬಿಡುಗಡೆಯಾಗುವ ನೀರು ಸೇರ್ಪಡೆಯಾಗುತ್ತಿದೆ. ಈ ಸ್ಥಳದಲ್ಲಿ ಮಾಲಿನ್ಯ ಕಂಡು ಬಂದಿದೆ ಎಂದು ಉತ್ತರಾಖಂಡ ಸರ್ಕಾರದ ಪರವಾಗಿ ಹಾಜರಿದ್ದ ವಕೀಲರು ತಿಳಿಸಿದ್ದಾರೆ.


7ನೇ ವರ್ಷದ ಪುಣ್ಯಸ್ಮರಣೆ



ಜನನ : 1929
ನಿಧನ : 11-11-2017

ಉಸಿರು ಹೋದರೂ, ಹೆಸರು ಉಳಿಸಿದ
ಡಾ|| ಎ. ಕೆಂಚಪ್ಪನವರು
ಹಿರಿಯ ವೈದ್ಯರು, ರವಿ ನರ್ಸಿಂಗ್ ಹೋಮ್, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

✦ ಶ್ರೀಮತಿ ಮತ್ತು ಡಾ|| ಕೆ. ಶ್ರೀನಿವಾಸರೆಡ್ಡಿ
✦ ಶ್ರೀಮತಿ ಮತ್ತು ಶ್ರೀ ಕೆ. ರಾಜಗೋಪಾಲರೆಡ್ಡಿ
✦ ಶ್ರೀಮತಿ ಮತ್ತು ಡಾ|| ಕೆ. ರವಿಕುಮಾರ್
✦ ಶ್ರೀಮತಿ ಮತ್ತು ಶ್ರೀ ಕೆ. ಶಶಿಧರ್
✦ ಶ್ರೀಮತಿ ಸುಜಾತ, ಡಾ|| ಡಿ.ಬಿ. ಧರ್ಮರೆಡ್ಡಿ
ಮತ್ತು ಮೊಮ್ಮಕ್ಕಳು, ಅಕ್ಕೇರ ವಂಶಸ್ಥರು ಹಾಗೂ ಬಂಧು-ಮಿತ್ರರು.
✦ ರವಿ ನರ್ಸಿಂಗ್ ಹೋಂ (ಕೆಂಚಪ್ಪ ಆಸ್ಪತ್ರೆ)
✦ ನಂದಿ ಇಂಡಸ್ಟ್ರೀಸ್ ✦ ನಂದಿಗಾವಿ ಟ್ರೇಡರ್ಸ್




# ಎಸ್.ಎಸ್.ಕೆ. ಸಮಾಜದಿಂದ ರಾಜರಾಜೇಶ್ವರಿ ಸಹಸ್ರಾರ್ಜುನ ಮಹಾರಾಜರ ಜಯಂತ್ಯೋತ್ಸವ

ದಾವಣಗೆರೆ, ನ.10- ಶ್ರೀ ಸೋಮವಂಶ ಸಹಸ್ರಾರ್ಜುನ ಕ್ಷತ್ರೀಯ ಸಮಾಜದ ಆರಾಧ್ಯ ದೈವ ಶ್ರೀ ರಾಜರಾಜೇಶ್ವರಿ ಸಹಸ್ರಾರ್ಜುನ ಮಹಾರಾಜರ ಜಯಂತ್ಯೋತ್ಸವವನ್ನು ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿನ ಶ್ರೀ ಶಂಕರ ಮಠದಲ್ಲಿ ಇಂದು ವಿಜೃಂಭಣೆಯಿಂದ ಆಚರಿಸಲಾಯಿತು.

ಶ್ರೀ ಸೋಮವಂಶ ಸಹಸ್ರಾರ್ಜುನ ಕ್ಷತ್ರೀಯ ಸಮಾಜದ ಅಧ್ಯಕ್ಷ ಮಲ್ಲಾರಸಾ ಆರ್. ಕಾಟ್ವೆ ಅವರ ಅಧ್ಯಕ್ಷತೆಯಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಶ್ರೀ ರಾಜರಾಜೇಶ್ವರಿ ಸಹಸ್ರಾರ್ಜುನ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಹುಬ್ಬಳ್ಳಿಯ ಹೆಸರಾಂತ ಸಂಗೀತಗಾರ ಪಂಡಿತ್ ಬಾಲಚಂದ್ರ ನಾಕೋಡ್, ರಾಣೇಬೆನ್ನೂರಿನ ನಗರಸಭೆ ಸದಸ್ಯರಾದ ಶ್ರೀಮತಿ ತ್ರಿವೇಣಿ ಎನ್. ಪವಾರ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಹಾರಾಜರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಎಸ್.ಎಸ್.ಕೆ. ಸಮಾಜದ ನಾಗರತ್ನ ಬದ್ದಿ, ಮಹೇಶ್ ಸೋಳಂಕೆ, ಕಾರ್ಯದರ್ಶಿ ಶುಭಾಂಜಲಿ ಕಠಾರೆ, ಪ್ರವೀಣ್ ಜಿ. ಕಾಟ್ವೆ ಮತ್ತು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪೂಜಾ ಸೋಳಂಕಿ ನಿರೂಪಿಸಿದರು. ಗಿರೀಶ್ ಮೆಹರ್‌ವಾಡೆ ಸ್ವಾಗತಿಸಿದರು. ಅಮೃತರಾಜ ಬದ್ದಿ ವಂದಿಸಿದರು.

# ಗಾಜಿನ ಮನೆಯ ರಾಜ್ಯೋತ್ಸವ 'ನವಶಕ್ತಿ ನಮನ' ನೃತ್ಯ ರೂಪಕ



ದಾವಣಗೆರೆ, ನ.10- ಜಿಲ್ಲಾಡಳಿತದಿಂದ ನಗರದ ಗಾಜಿನ ಮನೆಯಲ್ಲಿ ನಡೆಯುತ್ತಿರುವ 69ನೇ ಕರ್ನಾಟಕ ರಾಜ್ಯೋತ್ಸವದ ಸುವರ್ಣ ಸಂಭ್ರಮದಲ್ಲಿ ನಮನ ಅಕಾಡೆಮಿಯು 'ನವಶಕ್ತಿ ನಮನ' ಎಂಬ ನೃತ್ಯ ರೂಪಕ ಪ್ರಸ್ತುತಪಡಿಸಿದರು. ನೃತ್ಯ ರೂಪಕದಲ್ಲಿ 19 ಕಲಾವಿದರು ಪಾಲ್ಗೊಂಡಿದ್ದರು.

# ಬಾಪೂಜಿ ಬ್ಯಾಂಕ್ ನಿರ್ದೇಶಕರಾಗಿ ಡಾ. ಸುರೇಂದ್ರ ಶೆಟ್ಟಿ ಆಯ್ಕೆ



ದಾವಣಗೆರೆ, ನ.10- ನಗರದ ಬಾಪೂಜಿ ಕೋ-ಆಪ್ ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ದೇಶಕರಾಗಿ ಡಾ.ಸುರೇಂದ್ರ ಶೆಟ್ಟಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ದಾವಣಗೆರೆ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಚುನಾವಣಾಧಿಕಾರಿ ಸತೀಶ್ ನಾಯ್ಕ ತಿಳಿಸಿದ್ದಾರೆ.


ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327



Available in BILINGUAL (KANNADA AND ENGLISH)
INSIGHTSIAS SIMPLIFYING IAS EXAM PREPARATION
INSTAKAS
ಪ್ರಪ್ರಥಮ ಬಾರಿಗೆ
ಬೆಣ್ಣೆ ನಗರಿ-ದಾವಣಗೆರೆಯಲ್ಲಿ
InstaKAS ವತಿಯಿಂದ ಆಫ್‌ಲೈನ್ ಮತ್ತು ಆನ್ ಲೈನ್ ಕ್ರಾಶ್ ಕೋರ್ಸ್ ಅನ್ನು ಪ್ರಾರಂಭಿಸುತ್ತಿದ್ದೇವೆ.
ದಿಗ್ವಿಜಯ
ಎಲ್ಲಾ KPSC ಸಂಬಂಧಿತ ಪರೀಕ್ಷೆಗಳಿಗೆ GS ಕ್ರ್ಯಾಶ್ ಕೋರ್ಸ್
ದಾವಣಗೆರೆ
ತರಬೇತಿ ಅವಧಿಯು ಸುಮಾರು 94 ರಿಂದ 100 ಗಂಟೆಗಳವರೆಗೆ ಇರುತ್ತದೆ
18ನೇ ನವೆಂಬರ್ 2024 ರಂದು ಪ್ರಾರಂಭವಾಗುತ್ತದೆ
ವೈಶಿಷ್ಟ್ಯ:
- ದಾವಣಗೆರೆಯಲ್ಲಿ INSTA KAS ವತಿಯಿಂದ ಚೊಚ್ಚಲ ಬಾರಿಗೆ ವಿಶಿಷ್ಟ ಉಪಕ್ರಮ.
- ತರಬೇತಿ ಅವಧಿಯು ಸುಮಾರು 94 ರಿಂದ 100 ಗಂಟೆಗಳವರೆಗೆ ಇರುತ್ತದೆ.
- ಹೆಚ್ಚಿನ ಆದ್ಯತೆಯ ವಿಷಯಗಳನ್ನು ನಮ್ಮ ವಿಷಯ ತಜ್ಞರು ಚರ್ಚಿಸುತ್ತಾರೆ.
- ಉಚಿತ ಮಾರ್ಗದರ್ಶನವನ್ನು ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ಮಾದರಿಯಲ್ಲಿ ನೀಡಲಾಗುವುದು.



ಮಾರ್ಗದರ್ಶನದಲ್ಲಿ
ವಿನಯ್ ಕುಮಾರ್ ಜಿ ಬಿ
ಸಂಸ್ಥಾಪಕರು ಮತ್ತು ನಿರ್ದೇಶಕರು ಇನ್‌ಸೈಟ್ಸ್ ಐಎಎಸ್
ಶುಲ್ಕ- ಆಫ್‌ಲೈನ್: ~~₹2500/-~~ ₹2000/- ಹಳೆಯ ವಿದ್ಯಾರ್ಥಿಗಳಿಗೆ ₹1800/- Only till 15th Nov. 2024
ಶುಲ್ಕ - ಆನ್‌ಲೈನ್ : ~~₹2300/-~~ ₹1840/-
SUBSCRIBE HERE
ದಾವಣಗೆರೆ ವಿಳಾಸ: #1092 ಜಾಧವ ಕಾಂಪ್ಲೆಕ್ಸ್, ರಿಂಗ್ ರೋಡ್, ನಿಜಲಿಂಗಪ್ಪ ಬಡಾವಣೆ, ಎಜು ಏಷ್ಯಾ ಶಾಲೆ ಎದುರು, ದಾವಣಗೆರೆ, ಕರ್ನಾಟಕ-577004
ಸಂಪರ್ಕಿಸಿ: 9606388288
ಮೇಲ್: support@insightsias.com
www.insightsonindia.com
instacourses.insightsonindia.com
ಶಾಖೆಗಳು: ಬೆಂಗಳೂರು | ದೆಹಲಿ | ಹೈದರಾಬಾದ್ | ಶ್ರೀನಗರ | ದಾವಣಗೆರೆ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas